೧೦ ನನ್ನ ಜತೆಸೆರೆಯವನಾದ ಅರಿಸ್ತಾರ್ಕನೂ, ಬಾರ್ನಬನ ಅಳಿಯನಾದ [1]ಮಾರ್ಕನೂ ನಿಮ್ಮನ್ನು ವಂದಿಸು
೧೧ ತ್ತಾರೆ. ಇವನನ್ನು ಕುರಿತು ಅಪ್ಪಣೆ ಹೊಂದಿದಿರಿ; ನಿಮ್ಮ ಹತ್ತರ ಬಂದರೆ, ಅವನನ್ನು ಅಂಗೀಕರಿಸಿರಿ. ಯು
ಸ್ತನೆಂಬ ಯೇಸುವು ಸಹ ವಂದಿಸುತ್ತಾನೆ. ಇವರು ಪರಿಛೇದನೆಯವರೇ; [2]ಇವರು ಮಾತ್ರ ದೇವರ ರಾಜ್ಯ
ಕ್ಕಾಗಿ ನನ್ನ ಜತೆಕೆಲಸದವರಾಗಿದ್ದು, ನನಗೆ ಆದರಣೆಯಾಗಿದ್ದರು.
೧೨ ನಿಮ್ಮವನಾಗಿರುವ ಕ್ರಿಸ್ತನ ದಾಸನಾದ ಎಪಫ್ರನು ನಿಮ್ಮನ್ನು ವಂದಿಸುತ್ತಾನೆ. ನೀವು ದೇವರ ಸಮಸ್ತ
ಚಿತ್ತದಲ್ಲಿ ಸಂಪೂರ್ಣರಾಗಿಯೂ ತುಂಬಿದವರಾಗಿಯೂ ನಿಲ್ಲ ಬೇಕೆಂದು, ಯಾವಾಗಲೂ ನಿಮಗೋಸ್ಕರ
೧೩ ಪ್ರಾರ್ಥನೆಗಳಲ್ಲಿ ಹೋರಾಡುತ್ತಾನೆ. ಅವನು ನಿಮಗೋಸ್ಕರವೂ, ಲವೊದಿಕ್ಯೈಯದವರಿಗೋಸ್ಕರವೂ,
[3]ಹಿಯರಾಪೊಲಿಯವರಿಗೋಸ್ಕರವೂ, ಬಹು ಆಸಕ್ತಿ ಪಡುತ್ತಾನೆಂದು, ಅವನಿಗೆ ಸಾಕ್ಷಿ ಕೊಡುತ್ತೇನೆ.
೧೪ ವೈದ್ಯನಾದ ಪ್ರಿಯ [4]ಲೂಕನೂ, ದೇಮನೂ ನಿಮ್ಮನ್ನು ವಂದಿಸುತ್ತಾರೆ.
೧೫ ಲವೊದಿಕ್ಯೈಯದಲ್ಲಿರುವ ಸಹೋದರರನ್ನೂ, [5]ನುಂಫನನ್ನೂ, ಅವನ ಮನೆಯಲ್ಲಿರುವ ಸಭೆಯನ್ನೂ ವಂದಿಸಿರಿ.
೧೬ ಮತ್ತು ಈ ಪತ್ರಿಕೆಯು ನಿಮ್ಮಲ್ಲಿ ಓದಿ ಆದ ಮೇಲೆ, ಲವೊದಿಕ್ಯೈಯದವರ ಸಭೆಯಲ್ಲಿ ಓದಲ್ಪಡುವ ಹಾಗೆ
ಯೂ, [6]ಲವೊದಿಕ್ಯೈಯದ್ದನ್ನು ನೀವು ಸಹ ಓದುವ ಹಾಗೆಯೂ ಮಾಡಿರಿ.
೧೭ ಮತ್ತು [7]ಅರ್ಕಿಪ್ಪನಿಗೆ, ನೀನು ಕರ್ತನಲ್ಲಿ ಹೊಂದಿದ ಸೇವೆಯನ್ನು ಪೂರೈಸುವ ಹಾಗೆ ನೋಡು, ಎಂದು
ಹೇಳಿರಿ.
೧೮ ಪೌಲನೆಂಬ ನನ್ನ ಸ್ವಂತ ಕೈಯಿಂದ ವಂದನೆಯು. ನನ್ನ [8]ಬಂಧಗಳನ್ನು ಜ್ಞಾಪಕ ಮಾಡಿ ಕೊಳ್ಳಿರಿ.
ಕೃಪೆಯು ನಿಮ್ಮ ಸಂಗಡ ಇರಲಿ. ಆಮೆನ್.

1. (ಮಾರ್ಕನ ಸುವಾರ್ತೆಯ ಪೀಠಿಕೆಯಲ್ಲಿ ನೋಡ ಬೇಕು.) ಅರಿಸ್ತಾರ್ಕನು ಥೆಸ್ಸಲೊನೀಕ ಪಟ್ಟಣದವನಾಗಿಯೂ ಎಫೆಸದಲ್ಲಿ ನಡೆದ ಕಲಹದಲ್ಲಿ ಪೌಲನ ಸಂಗಡ ಇದ್ದವನಾಗಿಯೂ ಇದ್ದನು. ಬಾರ್ನಬನಿಗೆ ನೆಂಟನಾಗಿದ್ದ ಮಾರ್ಕನು ಸ್ವಲ್ಪ ಕಾಲ ಪೌಲನನ್ನು ಬಿಟ್ಟು ಅಗಲಿ ಇದ್ದಾಗ್ಯೂ, ತಿರಿಗಿ ಅವನ ಸಂಗಡ ಕೂಡಿ ಕೊಂಡು ಅವನಿಗೆ ಸಹಾಯಕನಾಗಿದ್ದನೆಂದು ತೋರುತ್ತದೆ. ಯುಸ್ತನೆಂಬ ಯೇಸುವು ಸಹ ಅವನಿಗೆ ಸಹಾಯಕನಾಗಿದ್ದನು. ಯೇಸು ಎಂಬ ಪರಿಶುದ್ಧ ಹೆಸರನ್ನು ಆಗಾಗ್ಯೆ ಉಚ್ಚರಿಸದ ಹಾಗೆ ಯುಸ್ತನೆಂಬ ಪ್ರತಿನಾಮದಿಂದ ಕರೆಯಲ್ಪಟ್ಟಿರುವನೆಂದು ತೋರುತ್ತದೆ.

2. ಯೆಹೂದ್ಯರಲ್ಲಿ ಪೌಲನ ಸಂಗಡ ರೋಮಪುರಿಯಲ್ಲಿದ್ದವರು ಇವರೇ. ಎಪಫ್ರನೂ (೧೨. ವ.) ಲೂಕನೂ ದೇಮನೂ (೧೪. ವ.) ಜನಾಂಗಗಳವರಾಗಿದ್ದರು.

3. ಹಿಯರಾಪೊಲಿ ಎಂಬುವದು ಫ್ರುಗ್ಯ ದೇಶಕ್ಕೆ ಶೇರಿದ್ದಾಗಿಯೂ, ಕೊಲೊಸ್ಸೆ ಲವೊದಿಕ್ಯೈಯ ಪಟ್ಟಣಗಳ ಸಮೀಪದಲ್ಲಿರುವದಾಗಿಯೂ ಇರುವ ಒಂದು ದೊಡ್ಡ ಪಟ್ಟಣವು. (ಲವೊದಿಕ್ಯೈಯ ಪಟ್ಟಣವನ್ನು ಕುರಿತು ಪ್ರಕಟ. ೩. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ಪರೋಪಕಾರಗುಣದಲ್ಲಿಯೂ ಭಕ್ತಿವೈರಾಗ್ಯದಲ್ಲಿಯೂ ಹೆಸರು ಹೊಂದಿದವನಾಗಿದ್ದ ಎಪಫ್ರನು ಕೊಲೊಸ್ಸೆ ಸಭೆಯವರ ನಿಮಿತ್ತವೂ, ಲವೊದಿಕ್ಯೈಯ ಹಿಯರಾಪೊಲಿ ಎಂಬ ಪಟ್ಟಣಗಳವರ ನಿಮಿತ್ತವೂ ಬಹು ವಾಂಛೆಯಿಂದ ಪ್ರಾರ್ಥನೆ ಮಾಡಿದನು. ಅವರಿಗೆ ಸಾಧಾರಣ ಆತ್ಮನ ವರಗಳು ಉಂಟಾಗ ಬೇಕೆಂದು ಮಾತ್ರವಲ್ಲ, ದೇವರ ಚಿತ್ತಕ್ಕೆ ಸಮರ್ಪಕವಾದ ಎಲ್ಲವುಗಳಲ್ಲಿಯೂ ಸಂಪೂರ್ಣರಾಗಿಯೂ, ಪೂರ್ಣ ನಿಶ್ಚಯವುಳ್ಳವರಾಗಿಯೂ ನೆಲೆಯಾಗಿರ ಬೇಕೆಂದು ಪ್ರಾರ್ಥಿಸಿದನು.

4. ಪರಮ ವೈದ್ಯನಾದ ಕ್ರಿಸ್ತನಿಗೆ ಶಿಷ್ಯನಾಗಿದ್ದ ಲೂಕನು ಎಲ್ಲರಿಂದಲೂ ಪ್ರೀತಿ ಮಾಡಲ್ಪಟ್ಟ ವೈದ್ಯನಾಗಿದ್ದನು. ದೇಮನಿಗೆ ಹೊಗಳಿಕೆಯಾದ ಒಂದನ್ನೂ ಹೇಳಲಿಲ್ಲ. ಮುಂದಿನ ಕಾಲದಲ್ಲಿ ಅವನ ಲೌಕಿಕದ ಆಶೆಯನ್ನು ಪೌಲನು ಆಗಲೇ ಕಂಡು, ಅವನ ವಿಷಯ ಏನೂ ಹೇಳಲಿಲ್ಲವಾದೀತು. (೨ ತಿಮೊ. ೪. ೧೦.)

5. ನುಂಫನು ಲವೊದಿಕ್ಯೈಯದವನಾಗಿಯೂ ಭಕ್ತಿಯಲ್ಲಿ ಮಿಂಚಿದ ಉತ್ತಮ ಕ್ರೈಸ್ತನಾಗಿಯೂ ಇದ್ದನೆಂದು ತೋರುತ್ತದೆ.

6. ಪೌಲನು ಲವೊದಿಕ್ಯೈಯರಿಗೆ ಒಂದು ಪತ್ರಿಕೆಯನ್ನು ಬರೆದು, ಅವರು ಅದನ್ನು ಓದಿದ ತರುವಾಯ ಕೊಲೊಸ್ಸೆಯರಿಗೆ ಕಳುಹಿಸ ಬೇಕೆಂದು ಹೇಳಿರುವನು. ಆ ಪತ್ರಿಕೆಯು ಕಾಪಾಡಲ್ಪಡಲಿಲ್ಲ. ಕೆಲವರು ಅದು ಎಫೆಸ್ಯರ ಪತ್ರಿಕೆ ಎಂದು ನೆನಸುತ್ತಾರೆ. (೧ ಕೊರಿ. ೫. ೯. ವಚನದ ವ್ಯಾಖ್ಯಾನದಲ್ಲಿಯೂ, ಎಫೆಸ್ಯರ ಪತ್ರಿಕೆಯ ಪೀಠಿಕೆಯಲ್ಲಿಯೂ ನೋಡ ಬೇಕು.)

7. ಅರ್ಕಿಪ್ಪನು ಒಂದು ವೇಳೆ ಫಿಲೆಮೋನನ ಮಗನಾಗಿರುವನು. (ಫಿಲೆಮೋ. ೧, ೨. ವ.) ಎಪಫ್ರನು ಅಲ್ಲಿ ಇಲ್ಲದೆ ಇದ್ದದರಿಂದ ಅರ್ಕಿಪ್ಪನಿಗೆ ಸಭೆಯ ಸೇವೆಯು ಅಧಿಕವಾಗಿರುವದು. ದೈವಸೇವೆಯನ್ನು ಹೊಂದಿದವರು ಅದನ್ನು ಸರಿಯಾಗಿ ನಡಿಸ ಹಂಗುಳ್ಳವರಾಗಿದ್ದಾರೆ.

8. ಬಂಧನದ ಕೈಯಿಂದಲೇ ಪೌಲನು ಸಭೆಗೆ ವಂದನೆಯನ್ನು ಬರೆಯುತ್ತಾನೆ. (ರೋಮಾ. ೧೬. ೨೨. ವಚನದ ವ್ಯಾಖ್ಯಾನ ನೋಡ ಬೇಕು.)

# THE FIRST EPISTLE OF PAUL THE APOSTLE TO THE THESSALONIANS.

## ಅಪೊಸ್ತಲನಾದ ಪೌಲನು ಥೆಸ್ಸಲೊನೀಕ್ಯರಿಗೆ ಬರೆದ ಮೊದಲನೇ ಪತ್ರಿಕೆಯ ಪೀಠಿಕೆ.

ಥೆಸ್ಸಲೊನೀಕ ಪಟ್ಟಣವು ಮಕೆದೋನ್ಯ ದೇಶದ ಎರಡನೇ ಭಾಗಕ್ಕೆ ಮುಖ್ಯವಾದದ್ದಾಗಿಯೂ, ಸಮುದ್ರದ ರೇವಿನಲ್ಲಿ ಕಟ್ಟಲ್ಪಟ್ಟದ್ದಾಗಿಯೂ ಇತ್ತು. ಅದರಲ್ಲಿ ರೋಮಾಯ ಧೊರೆ ವಾಸವಾಗಿದ್ದಾಗ್ಯೂ, ಸ್ವದೇಶ ಅಧಿಕಾರಿಗಳಿಂದ ಆಳಲ್ಪಡುತ್ತಾ ಇತ್ತು. ಏಜಿಯನ್ ಸಮುದ್ರದಲ್ಲಿ ನಡೆಯುತ್ತಿದ್ದ ವ್ಯಾಪಾರದಿಂದ ಕೊರಿಂಥ ಪಟ್ಟಣವೂ ಎಫೆಸ ಪಟ್ಟಣವೂ ಸಂಪತ್ತುಳ್ಳವುಗಳಾಗಿದ್ದ ಪ್ರಕಾರ, ಥೆಸ್ಸಲೊನೀಕ ಪಟ್ಟಣವು ಸಹ ಸಂಪತ್ತುಳ್ಳದ್ದಾಗಿತ್ತು. ಅದರಲ್ಲಿ ೭೦,೦೦೦ ಜನರು ನಿವಾಸವಾಗಿದ್ದರು. ಅದಕ್ಕೆ ಈಗ ಸಾಲೋನಿಕಿ ಎಂಬ ಹೆಸರುಂಟು.

ವ್ಯಾಪಾರ ವಿಷಯದಲ್ಲಿ ಕೀರ್ತಿ ಹೊಂದಿದ ಬೇರೆ ಪಟ್ಟಣಗಳಲ್ಲಿ ಇದ್ದ ಪ್ರಕಾರ ಥೆಸ್ಸಲೊನೀಕದಲ್ಲಿಯೂ ಅನೇಕ ಯೆಹೂದ್ಯರು ವಾಸವಾಗಿದ್ದರು. ಅವರ ಸಭೆಮನೆಯಲ್ಲಿ ಅಪೊಸ್ತಲನಾದ ಪೌಲನು ಪ್ರಸಂಗಿಸಿದ್ದರಿಂದ ಜನಾಂಗಗಳವರಲ್ಲಿ ಅನೇಕರು ಗುಣ ಪಟ್ಟ ಕಾರಣ, ಯೆಹೂದ್ಯರು ಹೊಟ್ಟೆಕಿಚ್ಚು ಪಟ್ಟು ಕಲಹ ಮಾಡಿದರು. ಅದರಿಂದ ಅವನು ಆ ಪಟ್ಟಣವನ್ನು ತ್ವರೆಯಾಗಿ ಬಿಟ್ಟು ಹೋಗ ಬೇಕಾಯಿತು. (ಅಪೊ. ಕ್ರಿ. ೧೭. ೨—೯. ವಚನಗಳ ವ್ಯಾಖ್ಯಾನ ನೋಡ ಬೇಕು.)

ತನ್ನಿಂದ ಗುಣ ಪಟ್ಟ ಜನರಿಗೆ ಅಧಿಕ ಉಪದ್ರ ಉಂಟಾಗಿದ್ದದ್ದನ್ನು ಪೌಲನು ಕೇಳಿ, (೧. ೬; ೨. ೧೪.) ಅವರನ್ನು ನೋಡುವದಕ್ಕೆ ಎರಡು ಸಾರಿ ಪ್ರಯತ್ನ ಮಾಡಿದಾಗ್ಯೂ, (೨. ೧೭, ೧೮.) ಯೆಹೂದ್ಯರ ಕೋಪದಿಂದ ಅವನ ಕೋರಿಕೆ ಈಡೇರಲಿಲ್ಲ. (ಅಪೊ. ಕ್ರಿ. ೧೭. ೧೩—೧೫.) ಆದರೂ ಅವರ ಸ್ಥಿತಿಗತಿಗಳನ್ನು ತಿಳಿದು ಕೊಳ್ಳಲೂ, ಅವರನ್ನು ಸ್ಥಿರ ಪಡಿಸಲೂ ತಿಮೊಥೆಯನನ್ನು ಕಳುಹಿಸಿದನು. (೩. ೧, ೨.) ಅವರ ಭಕ್ತಿಯೂ, ವೈರಾಗ್ಯವೂ, ವಿಶ್ವಾಸವೂ, ಪ್ರೀತಿಯೂ, ಸ್ಥಿರತ್ವವೂ, ತನ್ನ ಮೇಲಿರುವ ವಾಂಛೆಯೂ ಮುಂತಾದ ಸದ್ಗುಣಗಳನ್ನು ಕುರಿತು ಪೌಲನು ತಿಮೊಥೆಯನಿಂದ ಕೇಳಿ ತಿಳುಕೊಂಡು ಬಹಳ ಸಂತುಷ್ಟಿ ಹೊಂದಿದನು. (೩. ೬—೧೦.) ಆದಾಗ್ಯೂ ಜ್ಞಾನವಿಷಯಗಳಲ್ಲಿ ಇನ್ನೂ ಅವರಿಗೆ ಅಧಿಕ ಬೋಧನೆ ಬೇಕಾಗಿತ್ತು. ಅವರಲ್ಲಿ ಕೆಲಬರು ಕರ್ತನು ಅತಿ ಶೀಘ್ರವಾಗಿ ಪ್ರಸನ್ನನಾಗುವನೆಂಬ ತಪ್ಪಾದ ಆಲೋಚನೆಯಿಂದ, ಅದಕ್ಕೆ ಮುಂಚೆ ಸತ್ತು ಹೋದವರು ಆತನಿಂದ ಮಹಿಮೆ ಹೊಂದಲಾರರೆಂದು ಸಂದೇಹ ಉಳ್ಳವರಾಗಿದ್ದರು. (೪. ೧೩—೧೮.) ಐಶ್ವರ್ಯವಂತರಿಂದ ಸಹಾಯ ಹೊಂದ ಬಹುದೆಂಬುವ ಆಲೋಚನೆಯಿಂದ ಕೆಲಬರು ಕೆಲಸ ಮಾಡದೆ ಸೋಮಾರಿಗಳಾಗಿದ್ದರು. (೪. ೧೧, ೧೨.) ಕೊರಿಂಥದ ಸಭೆಯವರ ಹಾಗೆ, ಥೆಸ್ಸಲೊನೀಕದ ಸಭೆಯವರಲ್ಲಿ ಕೆಲಬರು ಪ್ರವಾದಿಸುವದೂ ಬೋಧಿಸುವದೂ ಮುಂತಾದ ಆತ್ಮನ ವರಗಳನ್ನು ತಕ್ಕ ಪ್ರಕಾರ ಎಣಿಸದೆ, ತಮ್ಮ ಕೀರ್ತಿಯನ್ನು ತೋರಿಸ ತಕ್ಕ ವರಗಳನ್ನೇ ಮುಖ್ಯವಾಗಿ ಅಪೇಕ್ಷಿಸುವವರಾಗಿದ್ದರೆಂದು ತೋರುತ್ತದೆ. (೫. ೨೦.)

ಇಂಥಾ ಸ್ಥಿತಿಯಲ್ಲಿದ್ದ ಸಭೆಯವರಿಗೆ ಪೌಲನು ಈ ಪತ್ರಿಕೆಯನ್ನು ೫೨ನೇ ವರುಷದಲ್ಲಿ ಕೊರಿಂಥ ಪಟ್ಟಣದಿಂದ ಬರೆದು ಕಳುಹಿಸಿದನು. ಇದರಲ್ಲಿ ಅವರ ಮೇಲೆ ತನಗಿದ್ದ ಪ್ರೀತಿಯೂ, ಉಪದ್ರಕಾಲದಲ್ಲಿ ಅವರು ಸ್ಥಿರವಾಗಿರ ಬೇಕೆಂಬುವ ವಾಂಛೆಯೂ, ಸಕಲ ಸುಳ್ಳು ಮತಗಳ ಅಭಿಪ್ರಾಯಗಳನ್ನು ಬಿಟ್ಟು, ದೇವಭಕ್ತಿಯಲ್ಲಿ ವೃದ್ಧಿ ಹೊಂದ ಬೇಕೆಂಬುವ ಆಶೆಯೂ ಅವನಲ್ಲಿ ಬಹಳವಾಗಿತ್ತೆಂಬುವದು ಚನ್ನಾಗಿ ತೋರುತ್ತದೆ.

ಅಪೊಸ್ತಲನಾದ ಪೌಲನು ಬರೆದ ಎಲ್ಲಾ ಪತ್ರಿಕೆಗಳಲ್ಲಿಯೂ ಥೆಸ್ಸಲೊನೀಕ್ಯರಿಗೆ ಬರೆದ ಪತ್ರಿಕೆಗಳೇ ಮೊದಲಿನವುಗಳು. ಈ ಪತ್ರಿಕೆಯನ್ನು ಎರಡು ಭಾಗಗಳಾಗಿ ವಿಭಾಗಿಸ ಬಹುದು.

I. ಥೆಸ್ಸಲೊನೀಕ್ಯ ಸಭೆಯವರ ಸ್ಥಿತಿಯು; ಅವರು ಪೌಲನನ್ನು ಅಂಗೀಕರಿಸಿದ ವಿಧವು; ಪೌಲನಿಗೆ ಅವರ ಮೇಲಿದ್ದ ಆಸಕ್ತಿ ಮುಂತಾದ ವಿಷಯಗಳು. (೧—೩. ಸಂಧಿ.)

II. ಸಾಧಾರಣ ಬುದ್ಧಿಮಾತುಗಳು; ಸತ್ತು ಹೋದವರ ವಿಷಯ ಆದರಣೆಯಾದ ಕಟ್ಟಳೆಗಳು. (೪, ೫. ಸಂಧಿ.)

# THE FIRST EPISTLE OF PAUL THE APOSTLE TO THE THESSALONIANS.

## ಅಪೊಸ್ತಲನಾದ ಪೌಲನು

# ಥೆಸ್ಸಲೊನೀಕ್ಯರಿಗೆ ಬರೆದ ಮೊದಲನೇ ಪತ್ರಿಕೆ.

ಸಭೆಯವರನ್ನು ಆಶೀರ್ವದಿಸಿದ್ದು; ಅವರು ಉಪದ್ರಗಳನ್ನು ತಾಳ್ಮೆಯಿಂದ ಸಹಿಸಿ, ಸುವಾರ್ತೆಯ ಸತ್ಯಕ್ಕೆ ತಕ್ಕ ಹಾಗೆ ನಡೆದದ್ದಕ್ಕಾಗಿ ಕರ್ತನನ್ನು ಸ್ತುತಿಸಿದ್ದು.

1. [1]ಪೌಲನೂ, [2]ಸಿಲ್ವಾನನೂ, ತಿಮೊಥೆಯನೂ, [3]ತಂದೆಯಾದ ದೇವರಲ್ಲಿಯೂ ಕರ್ತನಾದ ಯೇಸು
ಕ್ರಿಸ್ತನಲ್ಲಿಯೂ ಇರುವ ಥೆಸ್ಸಲೊನೀಕ್ಯರ ಸಭೆಗೆ—ನಮ್ಮ ತಂದೆಯಾದ ದೇವರಿಂದಲೂ, ಕರ್ತನಾದ ಯೇಸು
ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.
೨ ನಮ್ಮ ಪ್ರಾರ್ಥನೆಗಳಲ್ಲಿ ನಿಮ್ಮನ್ನು ಜ್ಞಾಪಕ ಮಾಡಿ ಕೊಂಡು, ಯಾವಾಗಲೂ ನಿಮ್ಮೆಲ್ಲರ ವಿಷಯ ದೇವ
೩ ರಿಗೆ ಸ್ತೋತ್ರ ಮಾಡುತ್ತೇವೆ. ಯಾಕಂದರೆ, ಎಡೆ ಬಿಡದೆ, ನಿಮ್ಮ ವಿಶ್ವಾಸದ ಕೆಲಸವನ್ನೂ, ಪ್ರೀತಿಯ ಕಷ್ಟ
ವನ್ನೂ, ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿರುವ ನಿಮ್ಮ [4]ನಿರೀಕ್ಷೆಯ ತಾಳ್ಮೆಯನ್ನೂ ನಮ್ಮ ತಂದೆಯಾದ
೪ ದೇವರ ಮುಂದೆ [5]ಜ್ಞಾಪಕ ಮಾಡಿ ಕೊಳ್ಳುತ್ತೇವೆ. ಪ್ರಿಯ ಸಹೋದರರೇ, ದೇವರಿಂದಿರುವ ನಿಮ್ಮ [6]ಆಯು
೫ ವಿಕೆಯನ್ನು ಬಲ್ಲೆವು. ಯಾಕಂದರೆ ನಾವು ನಿಮ್ಮಲ್ಲಿ ನಿಮಗೋಸ್ಕರ ಎಂಥವರಾಗಿದ್ದೆವೆಂದು ನೀವು ತಿಳಿದ

1. ಅಪೊಸ್ತಲನಾದ ಪೌಲನು ಥೆಸ್ಸಲೊನೀಕ ಸಭೆಯವರನ್ನು ದೇವರ ಹೆಸರಿನಿಂದ ಆಶೀರ್ವದಿಸಿದ ತರುವಾಯ, ಅವರು ಸುವಾರ್ತೆಯನ್ನು ಅಂಗೀಕರಿಸಿ, ಅದಕ್ಕೆ ಸರಿಯಾಗಿ ನಡೆದು ಕೊಂಡದರಿಂದ ಅದಕ್ಕಾಗಿ ದೇವರನ್ನು ಸ್ತುತಿಸುತ್ತಾನೆ. (೧. ಸಂಧಿ.) ತಾನು ಅವರಲ್ಲಿ ನಡಿಸಿದ ಸೇವೆಯನ್ನೂ ನಡೆದು ಕೊಂಡ ವಿಧವನ್ನೂ ಅವರಿಗೆ ಜ್ಞಾಪಕ ಪಡಿಸಿ, (೨. ೧—೧೨.) ಉಪದ್ರದ ಕಾಲದಲ್ಲಿ ಅವರಲ್ಲಿ ಪ್ರಕಟವಾದ ತಾಳ್ಮೆಯನ್ನೂ ದೃಢವನ್ನೂ ಕುರಿತು ತನಗೆ ಉಂಟಾದ ಸಂತೋಷವನ್ನು ಅವರಿಗೆ ತಿಳಿಸಿ, (೧೩—೧೬. ವ.) ಅವರನ್ನು ನೋಡ ಬೇಕೆಂಬ ತನ್ನ ಅಪೇಕ್ಷೆಯನ್ನೂ, ಅವರನ್ನು ಕುರಿತು ತಿಮೊಥೆಯನು ಹೇಳಿದ ವಿಶೇಷಗಳಿಂದ ತನಗುಂಟಾದ ಮನಸ್ಸಂತೋಷವನ್ನೂ ತೋರಿಸಿ, (೨. ೧೭—೩. ೧೦.) ಅವರು ಪ್ರೀತಿಯಲ್ಲಿಯೂ ಪರಿಶುದ್ಧತ್ವದಲ್ಲಿಯೂ ಹೆಚ್ಚೆಚ್ಚಾಗಿ ಬೆಳಿಯುವದಕ್ಕೋಸ್ಕರ ಪ್ರಾರ್ಥಿಸಿದೆನೆಂದು ಹೇಳುತ್ತಾನೆ. (೧೧—೧೩. ವ.)

2. ಸಿಲ್ವಾನನೆಂಬುವದೂ ಸೀಲನೆಂಬುವದೂ ಒಂದೇ ಹೆಸರು. (ಅಪೊ. ಕ್ರಿ. ೧೫. ೪೦.) ಪೌಲನು ಥೆಸ್ಸಲೊನೀಕಕ್ಕೆ ಹೋಗಿ ಅಲ್ಲಿ ಸುವಾರ್ತೆಯನ್ನು ಪ್ರಸಂಗಿಸಿ, ಸಭೆಯನ್ನು ಸ್ಥಾಪಿಸಿದ ಕಾಲದಲ್ಲಿ ಸಿಲ್ವಾನನೂ ತಿಮೊಥೆಯನೂ ಅವನ ಸಂಗಡ ಇದ್ದು ಸಹಾಯ ಮಾಡಿದವರಾದದರಿಂದ, ಅವರ ಹೆಸರುಗಳನ್ನು ಸಹ ಕೂಡಿಸಿ ಬರೆಯುತ್ತಾನೆ. (ಅಪೊ. ಕ್ರಿ. ೧೭. ೧, ೧೪.)

3. ತಂದೆಯಾದ ದೇವರಿಗೊಳಪಟ್ಟ ಸಭೆಯು ಅಜ್ಞಾನರ ಸಭೆಯಲ್ಲವೆಂದೂ, ಕರ್ತನಾದ ಯೇಸು ಕ್ರಿಸ್ತನಿಗೊಳಪಟ್ಟ ಸಭೆಯು ಯೆಹೂದ್ಯರ ಸಭೆಮನೆಯಲ್ಲವೆಂದೂ ತಿಳಿಯ ಬೇಕು. ಈ ಸಭೆಗೆ ದೇವರ ಕೃಪೆಯೂ ಸಮಾಧಾನವೂ ಆಗಲಿ ಎಂದು ಹರಸುತ್ತಾನೆ.

4. ವಿಶ್ವಾಸವು, ಪ್ರೀತಿಯು, ನಂಬಿಕೆಯು ಎಂಬ ಸದ್ಗುಣಗಳುಳ್ಳವರು ಅಧಿಕ ಜಾಗ್ರತೆಯಿಂದ ಪ್ರಯಾಸ ಪಡುವವರಾಗಿಯೂ, ಸಕಲವನ್ನೂ ತಾಳ್ಮೆಯಿಂದ ಸಹಿಸುವವರಾಗಿಯೂ ಇರುವರು. ಲೋಕದ ಕಾರ್ಯಗಳಲ್ಲಿ ಸಿದ್ಧಿ ಹೊಂದುವದಕ್ಕೆ ಇಂಥಾ ಸದ್ಗುಣಗಳು ಅವಶ್ಯವಾದರೆ, ಪರಮ ಕಾರ್ಯಗಳಲ್ಲಿ ಸಿದ್ಧಿ ಹೊಂದುವದಕ್ಕೆ ಈ ಗುಣಗಳು ಎಷ್ಟೋ ಅವಶ್ಯವಾಗಿವೆ.

5. ಪೌಲನು ತನ್ನನ್ನು ಕುರಿತು ಮಾತಾಡುವಾಗ, ಕೆಲ ಸಮಯಗಳಲ್ಲಿ ನಾವು ಎಂದು ಹೇಳುವದುಂಟು. (೨. ೧೮.) ಆದರೆ ಇಲ್ಲಿ ಸಿಲ್ವಾನನನ್ನೂ ತಿಮೊಥೆಯನನ್ನೂ ಶೇರಿಸಿ ನಾವು ಎಂದು ಬಹುವಚನವಾಗಿ ಹೇಳಿದನೆಂದು ತೋರುತ್ತದೆ.

6. ಅವರು ಸುವಾರ್ತೆ ಅಂಗೀಕರಿಸಿದ ವಿಧವನ್ನೂ, (೬. ವ.) ಅದಕ್ಕನುಸಾರವಾಗಿ ನಡೆದು, ಆತ್ಮದ ಫಲಗಳನ್ನು ಕೊಡುತ್ತಾ ಬಂದದ್ದನ್ನೂ (೭, ೮. ವ.) ಯೋಚಿಸುವಾಗ, ಅವರು ದೇವರಿಂದ ಆಯಲ್ಪಟ್ಟ ಪ್ರಿಯ ಸಹೋದರರೆಂಬುವದಕ್ಕೆ ತಕ್ಕ ಸಾಕ್ಷಿಯಾಗಿತ್ತು.



ಪ್ರಕಾರ, [1]ನಮ್ಮ ಸುವಾರ್ತೆಯು ಮಾತಿನಿಂದ ಮಾತ್ರವಲ್ಲ, ಬಲದಿಂದಲೂ ಪರಿಶುದ್ಧಾತ್ಮದಿಂದಲೂ, [2]ಬಹು
೬ ಭರವಸದಿಂದಲೂ, ನಿಮಗೆ ಬಂತು. ಇದಲ್ಲದೆ, ನೀವು ನಮ್ಮನ್ನೂ ಕರ್ತನನ್ನೂ ಅನುಸರಿಸಿದವರಾಗಿ, ಬಹು
೭ ಉಪದ್ರದಲ್ಲಿ ವಾಕ್ಯವನ್ನು ಪರಿಶುದ್ಧಾತ್ಮದ ಸಂತೋಷದ ಸಂಗಡ ಅಂಗೀಕರಿಸಿದ್ದರಿಂದ, ಮಕೆದೋನ್ಯದಲ್ಲಿ
೮ ಯೂ, [3]ಅಕಾಯದಲ್ಲಿಯೂ, ವಿಶ್ವಾಸಿಸುವವರೆಲ್ಲರಿಗೆ ಮಾದರಿಯಾದಿರಿ. ಹ್ಯಾಗಂದರೆ ನಿಮ್ಮಿಂದ ಕರ್ತನ
ವಾಕ್ಯದ ಶಬ್ದವು ಮಕೆದೋನ್ಯಕ್ಕೂ ಅಕಾಯಕ್ಕೂ [4]ಬಂದದ್ದಲ್ಲದೆ, ಸಕಲ ಸ್ಥಳಗಳಲ್ಲಿ ದೇವರ ಕಡೆಗೆ ಇರುವ
೯ ನಿಮ್ಮ ವಿಶ್ವಾಸವು ಪ್ರಸಿದ್ಧಿಯಾಯಿತು; ಆದದರಿಂದ ನಾವು ಏನಾದರೂ ಹೇಳುವದಕ್ಕೆ ಅವಶ್ಯವಿಲ್ಲ. ಹ್ಯಾ
ಗಂದರೆ [5]ಅವರೇ ನಮ್ಮನ್ನು ಕುರಿತು, ನಿಮ್ಮ ಬಳಿಗೆ ನಮಗೆ [6]ಎಂಥ ಪ್ರವೇಶವು ಇತ್ತೆಂದೂ, ನೀವು ಜೀವವುಳ್ಳ
೧೦ ನಿಜವಾದ ದೇವರನ್ನು ಸೇವಿಸಲೂ, ಅವನು ಸತ್ತವರೊಳಗಿಂದ ಎಬ್ಬಿಸಿದಂಥ, ಬರುವ ಕೋಪದಿಂದ ನಮ್ಮ
ನ್ನು [7]ರಕ್ಷಿಸುವಂಥ ಯೇಸು ಎಂಬ ಅವನ ಮಗನು ಪರಲೋಕದಿಂದ ಬರುವದನ್ನು ಎದುರು ನೋಡಲೂ,
ವಿಗ್ರಹಗಳನ್ನು ಬಿಟ್ಟು, ದೇವರ ಬಳಿಗೆ ಹ್ಯಾಗೆ ತಿರುಗಿ ಕೊಂಡಿರೆಂದೂ, ತಿಳಿಸುತ್ತಾರೆ.

2. ಹ್ಯಾಗಂದರೆ, ಸಹೋದರರೇ, ನಿಮ್ಮಲ್ಲಿ ಆದ ನಮ್ಮ ಪ್ರವೇಶವು [8]ವ್ಯರ್ಥವಾಗಿರಲಿಲ್ಲವೆಂದು, ನೀವೇ
೨ ಬಲ್ಲಿರಿ. ಆದರೆ ನಿಮಗೆ ತಿಳಿದ ಪ್ರಕಾರ, [9]ಫಿಲಿಪ್ಪಿಯಲ್ಲಿ ಮೊದಲು ಶ್ರಮೆಯನ್ನೂ ನಿಂದೆಯ
ನ್ನೂ ಪಟ್ಟು, ನಿಮಗೆ ದೇವರ ಸುವಾರ್ತೆಯನ್ನು ಬಹಳ ಹೋರಾಟದಿಂದ ಮಾತಾಡ ನಮ್ಮ ದೇವರಲ್ಲಿ

1. ಇದು ದೇವರ ಮಹಾ ಪ್ರೀತಿಯಿಂದ ಉಂಟಾದ ಸುವಾರ್ತೆಯಾದ ಕಾರಣ ದೇವರ ಸುವಾರ್ತೆ ಎಂದೂ, ಕ್ರಿಸ್ತನ ಕೃಪೆಯಿಂದ ಉಂಟಾದ ಕಾರಣ ಕ್ರಿಸ್ತನ ಸುವಾರ್ತೆ ಎಂದೂ, ರಕ್ಷಣೆಯನ್ನು ಸಾರುವ ಕಾರಣ ರಕ್ಷಣೆಯ ಸುವಾರ್ತೆ ಎಂದೂ, ನಾನಾ ಹೆಸರುಗಳು ಹೇಳಲ್ಪಟ್ಟವೆ. ನಮ್ಮ ಸುವಾರ್ತೆ ಅಂದರೆ ನಾವು ಪ್ರಸಂಗಿಸಿದ ಸುವಾರ್ತೆ ಎಂಬ ಅರ್ಥವು.

2. ಸುವಾರ್ತೆ ಪ್ರಸಂಗಿಸುವವರಿಗೂ, ಆ ಪ್ರಸಂಗವನ್ನು ಕೇಳುವವರಿಗೂ ಸಹ ಅದು ಭರವಸವುಳ್ಳದ್ದೇ. ಬಲದಿಂದಲೂ ಪರಿಶುದ್ಧಾತ್ಮನಿಂದಲೂ ಸಾರಲ್ಪಡುವ ಸುವಾರ್ತೆಯು ಪೂರ್ಣ ನಿಶ್ಚಯವನ್ನು ಉಂಟು ಮಾಡದೆ ಇರಲಾರದು. (ಅಪೊ. ಕ್ರಿ. ೧. ೯; ೧೦. ೩೮.)

3. ರೋಮಾಯರು ಗ್ರೇಕ ದೇಶವನ್ನು ಮಕೆದೋನ್ಯ ಅಕಾಯ ಎಂಬ ಎರಡು ಮುಖ್ಯ ನಾಡುಗಳಾಗಿ ವಿಭಾಗಿಸಿದ್ದರು. ಈ ಎರಡು ಶೀಮೆಗಳಲ್ಲಿಯೂ ಥೆಸ್ಸಲೊನೀಕ್ಯರ ದೇವಭಕ್ತಿ ಚನ್ನಾಗಿ ಪ್ರಕಾಶಿಸಿತು.

4. ಸುವಾರ್ತೆಯ ಶಬ್ದವು ಥೆಸ್ಸಲೊನೀಕ್ಯ ಸಭೆಯವರಿಂದ ಆ ದೇಶವೆಲ್ಲಾ ಹಬ್ಬಿತು. ಅವರು ಸುವಾರ್ತೆಯನ್ನು ಅಂಗೀಕರಿಸಿ, ಅದರ ನಿಮಿತ್ತ ಬಂದ ಉಪದ್ರವನ್ನು ತಾಳ್ಮೆಯಾಗಿ ಸಹಿಸಿ, ಪರಿಶುದ್ಧವಾಗಿ ನಡೆಯುತ್ತಾ ಬಂದ ಸಮಾಚಾರವು ಎಲ್ಲೆಲ್ಲಿಯೂ ಪ್ರಸಿದ್ಧವಾಯಿತು. ಮತ್ತು ಅವರೇ ಸುವಾರ್ತೆ ಪ್ರಸಂಗಿಸಿದ್ದರಿಂದಲೂ ಅದರ ಶಬ್ದವು ಎಲ್ಲೆಲ್ಲಿಯೂ ಕೇಳ ಬಂತು. ಕ್ರಿಸ್ತನನ್ನು ನೋಡಿ ಪೌಲನೂ, ಪೌಲನನ್ನು ನೋಡಿ ಥೆಸ್ಸಲೊನೀಕ್ಯ ಸಭೆಯವರೂ, ಥೆಸ್ಸಲೊನೀಕ್ಯರನ್ನು ನೋಡಿ ಮಕೆದೋನ್ಯ ಅಕಾಯ ದೇಶಗಳವರೂ ಪ್ರಪಂಚದ ಬಾಳನ್ನು ನಂಬದೆ, ಪರಮ ಬದುಕನ್ನು ಹುಡುಕಿ ಪರಿಶುದ್ಧರಾಗಿ ನಡಿಯ ಪ್ರೇರೇಪಿಸಲ್ಪಟ್ಟರು. ಇದು ಅತಿಶಯವಾದ ಮಾರ್ಪಡುವಿಕೆ.

5. ಅವರೇ ಎಂಬುವದು ಮಕೆದೋನ್ಯ ಅಕಾಯ ಶೀಮೆಗಳವರನ್ನು ಕುರಿತದ್ದು. (೮. ವ.) ನಾವು ಪ್ರಸಂಗಿಸಿದ ಸುವಾರ್ತೆಯಿಂದುಂಟಾದ ಅತಿಶಯವಾದ ಮಾರ್ಪಡುವಿಕೆಗೆ ನಿಮ್ಮ ದೇಶಸ್ಥರೇ ಸಾಕ್ಷಿಯಾಗಿದ್ದಾರೆಂದು ಹೇಳುತ್ತಾನೆ.

6. ನಿಮ್ಮ ಮಧ್ಯದಲ್ಲಿ ನಾವು ಪ್ರಾರಂಭಿಸಿದ ಕಾರ್ಯವು ಸಿದ್ಧಿಸಿತೆಂಬುವದಕ್ಕೆ ಅವರೇ ಸಾಕ್ಷಿ. (೨. ೧.) ಸುಳ್ಳು ದೇವರುಗಳಾದ ವಿಗ್ರಹಗಳನ್ನು ಬಿಟ್ಟು, ಜೀವವುಳ್ಳ ಒಬ್ಬನೇ ನಿಜವಾದ ದೇವರ ಬಳಿಗೆ ತಿರುಗಿ ಕೊಂಡದ್ದು, ಕತ್ತಲೆಯಲ್ಲಿ ಬೆಳಕಾದ ಪ್ರಕಾರ ದೊಡ್ಡ ಮಾರ್ಪಡುವಿಕೆಯಾಯಿತು.

7. ಪಾಪ, ಮರಣ, ಪಾತಾಳ ಎಂಬ ಶತ್ರುಗಳನ್ನು ಜಯಿಸಿ, ತನ್ನ ಸಭೆಯನ್ನು ರಕ್ಷಿಸಿದ ರಕ್ಷಣೆಯ ನಾಯಕನ ಪ್ರಸನ್ನತೆಯನ್ನು ಎದುರು ನೋಡಿ ಕೊಂಡಿರುವದೇ ಸಭೆಯ ನಂಬಿಕೆಯಾಗಿದೆ. ಈ ಪತ್ರಿಕೆಯಲ್ಲಿ ಇದರ ವಿಷಯವಾಗಿಯೇ ಹೇಳಿ ಇದೆ. ಒಂದೊಂದು ಸಂಧಿಯ ಕಡೆಯಲ್ಲಿಯೂ ಇದನ್ನು ನೋಡ ಬಹುದು. ಇದು ಗುಣ ಪಟ್ಟವರ ಲಕ್ಷಣವು. (೧. ೧೦.) ಇದೇ ಉತ್ತಮ ಬೋಧಕರ ಸಂತೋಷವು. (೨. ೧೯, ೨೦.) ಇದೇ ಪ್ರೀತಿ ಹೆಚ್ಚಾಗುವದಕ್ಕೆ ಹೇತುವೆ. (೩. ೧೨, ೧೩.) ಇದೇ ದುಃಖ ಪಡುವವರಿಗೆ ಆದರಣೆ. (೪. ೧೪—೧೮.) ಇದೇ ಅಪೊಸ್ತಲರ ಮುಖ್ಯ ಪ್ರಾರ್ಥನೆ. (೫. ೨೩.)

8. ಪೌಲನು ಮುಂತಾದವರು ಥೆಸ್ಸಲೊನೀಕದಲ್ಲಿ ಸುವಾರ್ತೆ ಪ್ರಸಂಗಿಸಿದ್ದು "ವ್ಯರ್ಥ", ಅಥವಾ ನಿಷ್ಪ್ರಯೋಜನವಾಗದೆ ಪ್ರಯೋಜನವೇ ಆಯಿತು.

9. ಅವರು ಥೆಸ್ಸಲೊನೀಕಕ್ಕೆ ಹೋಗುವದಕ್ಕಿಂತ ಮುಂಚೆ ಫಿಲಿಪ್ಪಿ ಪಟ್ಟಣದಲ್ಲಿ ಬಹಳ ಉಪದ್ರ ಪಟ್ಟರು. (ಅಪೊ. ಕ್ರಿ. ೧೬. ೧೯—೩೯.) ಅದರಿಂದ ಅವರು ಅಧೈರ್ಯ ಪಡದೆ ದೇವರ ಸಹಾಯದಿಂದ ಥೆಸ್ಸಲೊನೀಕದಲ್ಲಿಯೂ ಧೈರ್ಯವಾಗಿ ಸುವಾರ್ತೆ ಪ್ರಸಂಗಿಸಿದರು. ಅಲ್ಲಿ ಸಹ ಅವರಿಗೆ ಉಪದ್ರ ಸಂಭವಿಸಿದರೂ ಅದನ್ನು ಲಕ್ಷ್ಯ ಮಾಡದೆ, ಕ್ರಿಸ್ತನ ರಕ್ಷಣೆಯನ್ನು ಸಾರಿದರು. (ಅಪೊ. ಕ್ರಿ. ೧೭. ೫—೯.)

೩ ಧೈರ್ಯ ಪಟ್ಟೆವು. ಯಾಕಂದರೆ, ನಾವು ಹೇಳುವ ಬುದ್ಧಿಯು [1]ಮೋಸದಿಂದಲೂ ಅಶುದ್ಧತ್ವದಿಂದಲೂ
೪ ಕಪಟದಿಂದಲೂ ಅಲ್ಲ; ಆದರೆ ಸುವಾರ್ತೆಯು ನಮಗೆ ಒಪ್ಪಿಸಲ್ಪಡುವದಕ್ಕೆ ನಾವು ದೇವರಿಂದ [2]ಪರೀಕ್ಷಿ
ತರಾದ ಹಾಗೆಯೇ, ಮನುಷ್ಯರನ್ನಲ್ಲ, ನಮ್ಮ ಹೃದಯಗಳನ್ನು ಪರೀಕ್ಷಿಸುವ ದೇವರನ್ನೇ ಮೆಚ್ಚಿಸುವವರಾಗಿ
೫ ಮಾತಾಡುತ್ತೇವೆ. ಹ್ಯಾಗಂದರೆ, ನಿಮಗೆ ತಿಳಿದ ಪ್ರಕಾರ, ನಾವು ಎಂದೂ ಮುಖಸ್ತೋತ್ರದ ವಾಕ್ಯವ
೬ ನ್ನಾಗಲಿ, ದ್ರವ್ಯಾಶೆಯ [3]ನೆವವನ್ನಾಗಲಿ, ಬಳಸಲಿಲ್ಲವೆಂಬುವದಕ್ಕೆ ದೇವರೇ ಸಾಕ್ಷಿ. ಮತ್ತು ನಾವು ಕ್ರಿಸ್ತನ
ಅಪೊಸ್ತಲರಾಗಿ [4]ಭಾರವಾಗಿರ ಬಹುದಾಗಿದ್ದರೂ, ನಿಮ್ಮಿಂದಾಗಲಿ, ಬೇರೊಬ್ಬರಿಂದಾಗಲಿ, ಮನುಷ್ಯರಿಂದ
೭ ಮಹಿಮೆಯನ್ನು ಹುಡುಕಲಿಲ್ಲ. [5]ದಾದಿಯು ತನ್ನ ಮಕ್ಕಳನ್ನು ಸಾಕುವ ಪ್ರಕಾರ, ನಿಮ್ಮ ಮಧ್ಯದಲ್ಲಿ
೮ ಸಾಧುವಾಗಿದ್ದೆವು. ಈ ಪ್ರಕಾರ ನಿಮ್ಮಲ್ಲಿ ಮಮತೆ ಇಟ್ಟು, ನೀವು ನಮಗೆ ಪ್ರಿಯರಾಗಿರುವದರಿಂದ, ದೇ
ವರ ಸುವಾರ್ತೆಯನ್ನು ಮಾತ್ರವಲ್ಲ, ನಮ್ಮ [6]ಸ್ವಪ್ರಾಣಗಳನ್ನು ಸಹ ನಿಮಗೆ ಕೊಟ್ಟು ಬಿಡ ಮನಸ್ಸಾಗಿದ್ದೆವು.
೯ ಯಾಕಂದರೆ, ಸಹೋದರರೇ, ನಮ್ಮ ಕಷ್ಟವನ್ನೂ ಪ್ರಯಾಸವನ್ನೂ ಜ್ಞಾಪಕ ಮಾಡಿ ಕೊಳ್ಳುತ್ತೀರಿ; ಹ್ಯಾ
ಗಂದರೆ, ನಿಮ್ಮಲ್ಲಿ ಒಬ್ಬನಿಗಾದರೂ [7]ಭಾರವಾಗದ ಹಾಗೆ, ರಾತ್ರಿ ಹಗಲು ಕೆಲಸ ಮಾಡಿ, ದೇವರ ಸುವಾ
೧೦ ರ್ತೆಯನ್ನು ನಿಮಗೆ ಪ್ರಸಂಗಿಸಿದೆವು. ವಿಶ್ವಾಸಿಸುವವರಾದ ನಿಮಗೆ ಎಷ್ಟು ಪರಿಶುದ್ಧವಾಗಿಯೂ ನೀತಿಯಾ
೧೧ ಗಿಯೂ ನಿರ್ಮಲವಾಗಿಯೂ ಇದ್ದೆವೆಂಬುವದಕ್ಕೆ ನೀವೂ ದೇವರೂ ಸಾಕ್ಷಿಗಳಾಗಿದ್ಧೀರಿ. ಹ್ಯಾಗಂದರೆ,
ತಂದೆಯು ಸ್ವಂತ ಮಕ್ಕಳಿಗೆ ಹ್ಯಾಗೋ, ಹಾಗೆಯೇ ನಿಮ್ಮಲ್ಲಿ ಒಬ್ಬೊಬ್ಬನಿಗೆ ನಾವು ಬುದ್ಧಿಯನ್ನು ಹೇಳಿ,
೧೨ ಆದರಣೆಯನ್ನು ಕೊಟ್ಟು, ತನ್ನ ರಾಜ್ಯಕ್ಕೂ ಮಹಿಮೆಗೂ ನಿಮ್ಮನ್ನು [8]ಕರೆಯುವ ದೇವರಿಗೆ ತಕ್ಕ ಹಾಗೆ
ನಡಿಯ ಬೇಕೆಂತ, ಸಾಕ್ಷಿ ಕೊಟ್ಟೆವೆಂದು ಬಲ್ಲಿರಿ.

೧೩ ಆದದರಿಂದ ನೀವು ದೇವರ ವಾಕ್ಯವನ್ನು ನಮ್ಮಿಂದ ಕೇಳಿ ಹೊಂದಿದಾಗ, ಅದನ್ನು [9]ಮನುಷ್ಯರ ವಾಕ್ಯವೆಂ
ದಲ್ಲ, ಅದು ನಿಜವಾಗಿರುವ ಪ್ರಕಾರ, ವಿಶ್ವಾಸಿಸುವವರಾದ ನಿಮ್ಮಲ್ಲಿ ಯತ್ನೈಸುವ ದೇವರ ವಾಕ್ಯವೆಂದು
೧೪ ಅಂಗೀಕರಿಸಿದ್ದಕ್ಕೋಸ್ಕರ ನಾವು ಎಡೆ ಬಿಡದೆ ದೇವರಿಗೆ ಸ್ತೋತ್ರ ಮಾಡುತ್ತೇವೆ. ಯಾಕಂದರೆ, ಸಹೋದ

1. ಮೋಸವೆಂಬುವದು ಸುಳ್ಳು ಬೋಧನೆಯನ್ನು ಕುರಿತದ್ದು. ಅಪೊಸ್ತಲರ ಬೋಧನೆ ಸತ್ಯವಾಗಿಯೂ, ಅವರ ಮನಸ್ಸು ನಿಷ್ಕಳಂಕವಾಗಿಯೂ, ಅವರ ನಡತೆ ನೆಟ್ಟಗಾಗಿಯೂ ಇತ್ತು. ಸ್ವಪ್ರಯೋಜನವನ್ನೂ ಬೇರೊಬ್ಬರ ಹೊಗಳಿಕೆಯನ್ನೂ ಹುಡುಕದಿರುವ ಉತ್ತಮ ಬೋಧಕರ ಬೋಧನೆ ಸದ್ಬೋಧನೆ ಎಂಬುವದಕ್ಕೆ ಸಂದೇಹವಿಲ್ಲ. (೨ಕೊರಿ. ೨. ೧೭.)

2. ಸುವಾರ್ತೆ ಪ್ರಸಂಗಿಸುವದಕ್ಕೆ ದೇವರಿಂದ ಉತ್ತಮರೆಂದು ಎಣಿಸಲ್ಪಟ್ಟ ಅಪೊಸ್ತಲರು ಸುಳ್ಳು, ವಂಚನೆ, ಮೋಸ, ಸ್ವಪ್ರಯೋಜನ ಮುಂತಾದ ದುರ್ಗುಣ ದುರ್ನಡತೆಗಳೇನೂ ಇಲ್ಲದೆ ಯಥಾರ್ಥವಾಗಿ ನಡೆದರೆಂಬುವದಕ್ಕೆ ಹೃದಯಗಳನ್ನು ಬಲ್ಲ ದೇವರ ಮುಂದೆ ಧೈರ್ಯವಾಗಿ ಹೇಳುತ್ತಾರೆ. (೧ ತಿಮೊ. ೧. ೧೨.)

3. ಮನಸ್ಸಿನಲ್ಲಿ ಕಪಟವನ್ನೂ ಬಾಯಿಯಲ್ಲಿ ನಯವಾದ ಮಾತನ್ನೂ ಇಟ್ಟು ಕೊಂಡು ನಡಿಯುವವರ ಹಾಗೆ ಅಪೊಸ್ತಲರು ಮುಂತಾದವರು ನಡಿಯಲಿಲ್ಲ. ಅವರು ದ್ರವ್ಯಾಶೆಯಿಂದ ಸುಳ್ಳು ಹೇಳಿ, ಮನುಷ್ಯರನ್ನು ಮಾಯದ ಬಲೆಗೆ ಶಿಕ್ಕಿಸಿದವರಲ್ಲ. (ಲೂಕ. ೧೬. ೧೮. ವಚನದ ವ್ಯಾಖ್ಯಾನ ನೋಡ ಬೇಕು.)

4. ಕ್ರಿಸ್ತನ ದಾಸರಾದ ಅಪೊಸ್ತಲರು ತಮ್ಮಿಂದ ಬೋಧನೆ ಹೊಂದಿದ ಸಭೆಯವರಿಂದ ತಮ್ಮ ಜೀವನ ಹೊಂದುವದು ನ್ಯಾಯವಾಗಿದ್ದರೂ, ಪೌಲನು ಮುಂತಾದವರು ಸಭೆಯವರಿಗೆ ಭಾರವಾಗಿರಲಿಲ್ಲ. ತಮ್ಮ ಜೀವನಕ್ಕಾಗಿ ತಾವೇ ಕೆಲಸ ಮಾಡಿದರು.

5. ತನ್ನ ಪ್ರಿಯ ಮಗುವಿಗೆ ಹಾಲು ಕೊಟ್ಟು ನಿತ್ಯವೂ ಪೋಷಿಸುವ ತಾಯಿಯ ಹಾಗೆ, ಪೌಲನು ತಾನು ಸುವಾರ್ತೆಯಿಂದ ಹೆತ್ತ ಮಕ್ಕಳಾದ ಸಭೆಯವರನ್ನು ಪ್ರೀತಿಯಿಂದಲೂ ದಯದಿಂದಲೂ ಕಾಪಾಡುತ್ತಾ ಬಂದನೇ ಹೊರ್ತು, ಸ್ವಲ್ಪವಾದರೂ ಅವರಿಗೆ ಭಾರವಾಗಿರಲಿಲ್ಲ.

6. ಪೌಲನು ಸಭೆಯನ್ನು ಪ್ರೀತಿ ಮಾಡಿದ್ದು ಇಲ್ಲಿ ಚನ್ನಾಗಿ ತೋರುತ್ತದೆ. ಅವರಿಗೆ ಸುವಾರ್ತೆಯ ಶ್ರೇಷ್ಠ ಆಶೀರ್ವಾದವನ್ನು ಕೊಟ್ಟದ್ದಲ್ಲದೆ ಅವರ ಮೇಲೆ ಇಟ್ಟ ಪ್ರೀತಿಯಿಂದ ತನ್ನ ಪ್ರಾಣವನ್ನು ಸಹ ಕೊಡ ಸಿದ್ಧವಾಗಿದ್ದನು. (ರೋಮಾ. ೯. ೩. ೨ಕೊರಿ. ೧೨. ೧೪, ೧೫. ಫಿಲಿ. ೨. ೧೭.)

7. ಪೌಲನು ಸಭೆಯವರ ಮೇಲೆ ಇಟ್ಟಿದ್ದ ಪ್ರೀತಿಗೂ, ಅವರಿಗೆ ಭಾರವಾಗಿರ ಬಾರದೆಂದು ಅವನ ಮನಸ್ಸಿನಲ್ಲಿ ಇದ್ದ ಅಪೇಕ್ಷೆಗೂ (೬. ವ.) ಅವನು ತನ್ನ ಸ್ವಂತ ಕೈಯಿಂದ ಕೆಲಸ ಮಾಡಿದ್ದೇ ತಕ್ಕ ಸಾಕ್ಷಿಯಾಗಿತ್ತು. (ಅಪೊ. ಕ್ರಿ. ೧೮. ೩.)

8. ಪ್ರಯೋಜನವನ್ನು ಹುಡುಕದೆ, ತಾಳ್ಮೆಯಾಗಿ ಕೆಲಸ ಮಾಡಿ ಸತ್ಯದ ದಾರಿಯಲ್ಲಿ ನಡೆಯುವದಕ್ಕೆ, ದೇವರು ತನ್ನ ರಾಜ್ಯಕ್ಕೂ ಮಹಿಮೆಗೂ ಕರೆಯುವದೇ ತಕ್ಕ ಕಾರಣವಾಗಿಯೂ ಯತ್ನವಾಗಿಯೂ ಇರುತ್ತದೆ.

9. ಸುವಾರ್ತೆಯು ತಪ್ಪಿ ಹೋಗುವ ಮನುಷ್ಯರ ವಚನವಾಗಿರದೆ, ಸತ್ಯಪರನಾದ ದೇವರ ವಾಕ್ಯವಾಗಿದೆ. ಅದರ ಸ್ವಭಾವದಿಂದಲೂ, ಅದರಿಂದ ಮನುಷ್ಯರಿಗುಂಟಾಗುವ ಪ್ರಯೋಜನದಿಂದಲೂ, ಅದು ಸತ್ಯವಾಕ್ಯವೆಂಬುವದು ಪ್ರಕಟವಾಗಿದೆ.



ರರೇ, ನೀವು ಕ್ರಿಸ್ತ ಯೇಸುವಿನಲ್ಲಿ ಯೆಹೂದದಲ್ಲಿರುವ ದೇವರ ಸಭೆಗಳನ್ನು ಅನುಸರಿಸುವವರಾದಿರಿ. ಅವರು
೧೫ ಸಹ ಯೆಹೂದ್ಯರಿಂದ ಅನುಭವಿಸಿದವುಗಳನ್ನೇ ನೀವು ಸ್ವಕುಲದವರಿಂದ ಅನುಭವಿಸಿದಿರಿ. ಅವರು ಕರ್ತನಾದ
ಯೇಸುವನ್ನೂ ಸ್ವಂತ ಪ್ರವಾದಿಗಳನ್ನೂ ಕೊಂದು, ನಮ್ಮನ್ನು [1]ಹಿಂಸಿಸಿ, ದೇವರನ್ನು ಮೆಚ್ಚಿಸದೆ, [2]ಮನುಷ್ಯ
೧೬ ರೆಲ್ಲರಿಗೆ ವಿರೋಧವಾಗಿದ್ದು, ತಮ್ಮ ಪಾಪಗಳನ್ನು [3]ಎಂದಿಗೂ ಪೂರೈಸುವ ಹಾಗೆ, ನಾವು ಜನಾಂಗಗಳ
ಸಂಗಡ ಅವರು ರಕ್ಷಿಸಲ್ಪಡುವದಕ್ಕಾಗಿ, ಮಾತಾಡದ ಹಾಗೆ, ಅಡ್ಡಿ ಮಾಡುತ್ತಾರೆ. ಆದರೆ [4]ಕೋಪವು ಕಡೇ
ವರೆಗೂ ಅವರ ಮೇಲೆ ಬಂತು.

ಪೌಲನು ಥೆಸ್ಸಲೊನೀಕ್ಯರನ್ನು ನೋಡ ಅಪೇಕ್ಷಿಸಿದ್ದು; ಅವರ ಸ್ಥಿರತ್ವವನ್ನು ಕೇಳಿ ಸಂತೋಷಿಸಿದ್ದು;
ಅವರ ಭಕ್ತಿ ಅಭಿವೃದ್ಧಿಯಾಗುವಂತೆ ಪ್ರಾರ್ಥಿಸಿದ್ದು.

೧೭ ಆದರೆ, ಸಹೋದರರೇ, ನಾವು ಹೃದಯದಿಂದಲ್ಲ, ಮುಖದಿಂದಲೇ [5]ಘಳಿಗೆ ಹೊತ್ತು ನಿಮ್ಮನ್ನು ಅಗಲಿದವ
೧೮ ರಾಗಿ, ಬಹಳ ಆಶೆಯಿಂದ ನಿಮ್ಮ ಮುಖವನ್ನು ನೋಡ ಹೆಚ್ಚು ಜಾಗ್ರತೆಯಾಗಿದ್ದೆವು. ಆದದರಿಂದ ನಾವು,
ವಿಶೇಷವಾಗಿ ಪೌಲನೆಂಬ ನಾನು, ನಿಮ್ಮ ಹತ್ತರ ಬರ ಒಂದೆರಡು ಸಾರಿ ಮನಸ್ಸಾಗಿದ್ದೆವು. ಆದರೆ [6]ಸೈತಾ
೧೯ ನನು ನಮ್ಮನ್ನು ಆಟಂಕಿಸಿದನು. ಯಾಕಂದರೆ ನಮ್ಮ ನಿರೀಕ್ಷೆಯೂ, ಸಂತೋಷವೂ, [7]ಹೆಚ್ಚಳದ ಕಿರೀಟವೂ
ಯಾವದು? ನಮ್ಮ ಕರ್ತನಾದ ಯೇಸು ಕ್ರಿಸ್ತನ ಮುಂದೆ ಅವನ ಬರುವಿಕೆಯಲ್ಲಿ ನೀವೇ ಅಲ್ಲವೋ?
೨೦ ಯಾಕಂದರೆ ನೀವು ನಮ್ಮ ಮಹಿಮೆಯೂ ಸಂತೋಷವೂ ಆಗಿದ್ಧೀರಿ.

3. ಆದದರಿಂದ, [8]ಇನ್ನೂ ತಾಳಲಾರದೆ, ಅಥೇನೆಯಲ್ಲಿ ಒಬ್ಬರಾಗಿ ಬಿಡಲ್ಪಡುವದು ಒಳ್ಳೇದೆಂದೆಣಿಸಿ,
೨ ನಮ್ಮ [9]ಸಹೋದರನೂ, ದೇವರ ಸೇವಕನೂ, ಕ್ರಿಸ್ತನ ಸುವಾರ್ತೆಯಲ್ಲಿ ನಮ್ಮ ಜತೆಕೆಲಸದವನೂ, ಆಗಿರುವ
ತಿಮೊಥೆಯನನ್ನು ನಿಮ್ಮ ವಿಶ್ವಾಸದ ವಿಷಯವಾಗಿ ನಿಮ್ಮನ್ನು ಸ್ಥಿರ ಪಡಿಸಿ, ನಿಮ್ಮನ್ನು ಆದರಿಸುವದಕ್ಕೆ ಕಳು
೩ ಹಿಸಿದೆವು— ಯಾವನಾದರೂ ಈ ಉಪದ್ರಗಳಿಂದ ಚಂಚಲವಾಗದ ಹಾಗೆಯೇ; ಯಾಕಂದರೆ ಇದಕ್ಕೆ

1. ಥೆಸ್ಸಲೊನೀಕದಲ್ಲಿಯೂ ಬೇರೆ ಸ್ಥಳಗಳಲ್ಲಿಯೂ ಅಪೊಸ್ತಲರು ಮುಂತಾದವರನ್ನು ಹಿಂಸಿಸಿದವರು ಬಹುಶಾ ಯೆಹೂದ್ಯರೇ. (ಅಪೊ. ಕ್ರಿ. ೧೪. ೨—೬, ೧೯; ೧೭. ೫—೧೪.) ಕ್ರಿಸ್ತನನ್ನು ಶಿಲುಬೆಯ ಮೇಲೆ ಕೊಂದದರಿಂದಲೂ, ಆತನ ದಾಸರಾದ ಪ್ರವಾದಿಗಳನ್ನೂ ಅಪೊಸ್ತಲರನ್ನೂ ಉಪದ್ರ ಪಡಿಸಿ, ಅವರಲ್ಲಿ ಕೆಲವರನ್ನು ಕೊಂದದರಿಂದಲೂ, ಸತ್ಯ ಮಾರ್ಗದ ಮೇಲೆ ಯೆಹೂದ್ಯರಿಗಿದ್ದ ತೀರದ ಹಗೆಯು ಪ್ರಕಟವಾಗುತ್ತದೆ.

2. ಮನುಷ್ಯರು ರಕ್ಷಣೆಯ ಮಾರ್ಗದಲ್ಲಿ ಶೇರುವದನ್ನು ಸಹಿಸಲಾರದೆ, ಅವರನ್ನು ಆಟಂಕಿಸುವದರಿಂದ, ಯೆಹೂದ್ಯರು ಮನುಷ್ಯರೆಲ್ಲರಿಗೆ ವಿರೋಧಿಗಳಾಗಿದ್ಧಾರೆ.

3. ಯೆಹೂದ್ಯರು ಪೂರ್ವಕಾಲದಲ್ಲಿ ಮಾತ್ರವಲ್ಲ, ಎಲ್ಲಾ ಕಾಲಗಳಲ್ಲಿಯೂ ಮನುಷ್ಯರ ರಕ್ಷಣೆಗೆ ವಿಘ್ನ ಮಾಡುವ ಪಾಪವನ್ನು ಪೂರೈಸುವವರಾಗಿದ್ಧಾರೆ.

4. ಭಕ್ತಿಹೀನರಾದ ಯೆಹೂದ್ಯ ಜಾತಿಯವರ ಮೇಲೆ ದೇವಕೋಪಾಜ್ಞೆ ಆ ಕಾಲದಲ್ಲಿ ಬರುವದಾಗಿತ್ತು. ಇನ್ನು ಇಪ್ಪತ್ತು ವರುಷಗಳ ತರುವಾಯ ಯೆರೂಸಲೇಮು ಸರ್ವ ನಾಶವಾಗುವ ಕಾಲದಲ್ಲಿ ಅದು ಪೂರ್ಣವಾಗಿ ಪ್ರಕಟವಾಯಿತು.

5. ಪೌಲನು ಥೆಸ್ಸಲೊನೀಕದಿಂದ ಹೊರಟು, ಬೆರೋಯಕ್ಕೆ ಹೋದಾಗ ಅತಿ ಶೀಘ್ರವಾಗಿ ತಿರಿಗಿ ಬರ ಬಹುದೆಂದು ನೆನಸಿ ಹೋಗಿರುವನು. ಆದಾಗ್ಯೂ ಹಲವು ಕಾರಣಗಳಿಂದ ಐದು ವರುಷಗಳ ಮಟ್ಟಿಗೂ ಅಲ್ಲಿಗೆ ಹೋಗಲಿಲ್ಲ. ಆದರೂ ಮನಸ್ಸೆಲ್ಲಾ ಅವರ ಮೇಲೆಯೇ ಇತ್ತು.

6. ಅವರು ಸುವಾರ್ತೆ ಪ್ರಸಂಗಿಸಿದ್ದರಿಂದ, ಅವರ ಮೇಲೆ ಅನೇಕರ ಹಗೆಯನ್ನು ಎಬ್ಬಿಸಿ, ಹೀಗೆ ಸೈತಾನನು ಅವರು ಹೋಗದ ಹಾಗೆ ಆಟಂಕಿಸಿರುವನು.

7. ಪೌಲನು ತನಗೆ ಹೆಚ್ಚಳದ ಕಿರೀಟವಾಗಿರುವವರನ್ನು ಕಂಡು, ಸಂತೋಷಿಸ ಅಪೇಕ್ಷಿಸಿದ್ದು ಆಶ್ಚರ್ಯವಲ್ಲ. ಅವರನ್ನು ಮಹಿಮೆಯಲ್ಲಿ ದರ್ಶಿಸಿ, ಅವರು ಕ್ರಿಸ್ತನ ಮಹಿಮೆಯ ಕಿರೀಟದಲ್ಲಿ ಹೊಳೆಯುವ ರತ್ನಗಳಾಗಿ ಕಾಣಿಸುವದು ಆತನಿಗೆ ಇನ್ನೂ ಆನಂದವಾಗಿರುವದು.

8. ಥೆಸ್ಸಲೊನೀಕ್ಯರನ್ನು ಪೌಲನು ನೋಡುವದಕ್ಕೆ ಅಪೇಕ್ಷೆಯಾಗಿದ್ದು, ಸೈತಾನನಿಂದ ಆಟಂಕಿಸಲ್ಪಟ್ಟ ಕಾರಣ ಇನ್ನು ತಾಳಲಾರದೆ, ತನಗೆ ಬಹಳ ಸಹಾಯಕನಾಗಿದ್ದ ಉತ್ತಮ ದಾಸನಾದ ತಿಮೊಥೆಯನನ್ನು ಅವರ ಬಳಿಗೆ ಕಳುಹಿಸಿದನು. (ಅಪೊ. ಕ್ರಿ. ೧೭. ೧೪, ೧೫.)

9. ಥೆಸ್ಸಲೊನೀಕ್ಯ ಸಭೆಯವರಿಗೆ ಸಂಭವಿಸಿದ್ದ ಉಪದ್ರದಲ್ಲಿ ಅವರು ಜಾರಿ ಬೀಳದೆ ಸ್ಥಿರವಾಗಿ ನಿಲ್ಲಿಸುವ ಉದ್ದಿಶ್ಯ ಅವರನ್ನು ಆದರಿಸುವದಕ್ಕೆ ಪೌಲನು ಅಥೇನೆ ಪಟ್ಟಣದಲ್ಲಿ ಒಂಟಿಯಾಗಿದ್ದುಕೊಂಡು ತಿಮೊಥೆಯನನ್ನು ಕಳುಹಿಸಿದನು.

೪ ನೇಮಿಸಲ್ಪಟ್ಟದ್ಧೇವೆಂದು [1]ನೀವೇ ಬಲ್ಲಿರಿ. ಯಾಕಂದರೆ ನಿಮ್ಮ ಹತ್ತರವಿದ್ದಾಗ, ನಾವು ಉಪದ್ರ ಪಡುವದಕ್ಕಿ
೫ ರುತ್ತೇವೆಂದು, ನಿಮಗೆ ಮುಂದಾಗಿ ಹೇಳಿದೆವಲ್ಲ? ಹಾಗೆಯೇ ಆಯಿತೆಂದು ಬಲ್ಲಿರಿ. ಆದದರಿಂದ, ನಾನು
ಸಹ ಇನ್ನೂ ತಾಳಲಾರದೆ, ಒಂದು ವೇಳೆ ಶೋಧಕನು ನಿಮ್ಮನ್ನು ಶೋಧಿಸುವದರಿಂದ, ನಮ್ಮ ಕಷ್ಟವು ವ್ಯ
ರ್ಥವಾಗದ ಹಾಗೆ, ನಿಮ್ಮ ವಿಶ್ವಾಸವನ್ನು ತಿಳಿದು ಕೊಳ್ಳುವದಕ್ಕೆ ಕಳುಹಿಸಿದ್ಧೇನೆ.
೬ ಆದರೆ ಈಗ ತಿಮೊಥೆಯನು ನಿಮ್ಮ ಕಡೆಯಿಂದ ನಮ್ಮ ಹತ್ತರ ಬಂದು, ನಿಮ್ಮ ವಿಶ್ವಾಸ ಪ್ರೀತಿಗಳನ್ನೂ,
ನಾವು ನಿಮ್ಮನ್ನು ನೋಡ ಇಚ್ಛೈಸುವ ಪ್ರಕಾರ, ನೀವು ನಮ್ಮನ್ನು ನೋಡ ಇಚ್ಛೈಸಿ, ಯಾವಾಗಲೂ ನಮ
೭ ಗೋಸ್ಕರ ಒಳ್ಳೇ ಜ್ಞಾಪಕ ಮಾಡಿ ಕೊಳ್ಳುತ್ತೀರೆಂಬ ಒಳ್ಳೇ ಸಮಾಚಾರ ನಮಗೆ ಹೇಳಿದ ಮೇಲೆ, ಇದರ
ನಿಮಿತ್ತ, ಸಹೋದರರೇ, ನಮ್ಮ ಸಮಸ್ತ ಉಪದ್ರ ಅವಸರಗಳಲ್ಲಿ ನಿಮ್ಮನ್ನು ಕುರಿತು ನಿಮ್ಮ ವಿಶ್ವಾಸದಿಂದ
೮, ೯ ಆದರಿಸಲ್ಪಟ್ಟೆವು. ಹ್ಯಾಗಂದರೆ, ನೀವು ಕರ್ತನಲ್ಲಿ ನಿಂತರೆ, ಈಗ [2]ಬದುಕುತ್ತೇವೆ. ಯಾಕಂದರೆ ನಾವು
ನಮ್ಮ ದೇವರ ಮುಂದೆ ನಿಮ್ಮ ನಿಮಿತ್ತ ಪಡುವ ಎಲ್ಲಾ ಸಂತೋಷಕ್ಕಾಗಿ, ನಿಮಗೋಸ್ಕರ ದೇವರಿಗೆ ಯಾವ
೧೦ ಸ್ತೋತ್ರವನ್ನು ಪ್ರತಿಯಾಗಿ ಮಾಡ ಬಹುದು? ನಿಮ್ಮ ಮುಖವನ್ನು ನೋಡುವದಕ್ಕೂ, [3]ನಿಮ್ಮ ವಿಶ್ವಾ
ಸದ ಕೊರತೆಗಳನ್ನು ಪೂರ್ಣ ಮಾಡುವದಕ್ಕೂ, ನಾವು ರಾತ್ರಿ ಹಗಲು ಅತ್ಯಧಿಕವಾಗಿ ಬೇಡಿ ಕೊಳ್ಳುತ್ತೇವೆ.
೧೧ ನಮ್ಮ ತಂದೆಯಾದ ದೇವರು ತಾನೇ, ನಮ್ಮ ಕರ್ತನಾದ ಯೇಸು ಕ್ರಿಸ್ತನು ಸಹ, ನಿಮ್ಮ ಕಡೆಗೆ ನಮ್ಮ
೧೨ [4]ಮಾರ್ಗವನ್ನು ಸರಾಗ ಮಾಡಲಿ. ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನು ತನ್ನ ಸಮಸ್ತ [5]ಪರಿಶು
ದ್ಧರ ಸಂಗಡ ಬರುವದರಲ್ಲಿ, ನಮ್ಮ ತಂದೆಯಾದ ದೇವರ ಮುಂದೆ ನಿಮ್ಮ ಹೃದಯಗಳನ್ನು ಪರಿಶುದ್ಧತ್ವದಲ್ಲಿ
೧೩ ತಪ್ಪಿಲ್ಲದೆ ಸ್ಥಿರ ಪಡಿಸುವ ಹಾಗೆ, ನಾವು ನಿಮಗೆ ಮಾಡುವ ಪ್ರಕಾರ, ನೀವು ನಿಮ್ಮಲ್ಲಿ ಒಬ್ಬೊಬ್ಬನಿಗೂ
ಎಲ್ಲರಿಗೂ ಮಾಡುವ ಪ್ರೀತಿಯಲ್ಲಿ ಕರ್ತನು ನಿಮ್ಮನ್ನು ಪೂರೈಸಿ, ಹೆಚ್ಚ ಮಾಡಲಿ.

ಶುದ್ಧತ್ವವೂ ಚುರುಕೂ ಸಹೋದರಸ್ನೇಹವೂ ಉಳ್ಳವರಾಗಿ ಸುವಾರ್ತೆಗೆ ತಕ್ಕ ಹಾಗೆ ನಡಿಯ ಆಜ್ಞಾಪಿಸಿದ್ದು.

**4.** [6]**ಕ**ಡೆಯಲ್ಲಿ, ಸಹೋದರರೇ, ನೀವು ಹ್ಯಾಗೆ ನಡೆದು ದೇವರನ್ನು ಮೆಚ್ಚಿಸ ಬೇಕೆಂದು, ನಮ್ಮಿಂದ ಗ್ರಹಿಸಿದ

1. ಉತ್ತಮ ಕ್ರೈಸ್ತರಿಗೆ ಉಪದ್ರ ಬರುತ್ತದೆ ಎಂಬುವದನ್ನು ಪೌಲನ ಬೋಧನೆಯಿಂದಲೂ, ತಮ್ಮ ಸ್ವಂತ ಅನುಭವದಿಂದಲೂ ಥೆಸ್ಸಲೊನೀಕ್ಯ ಸಭೆಯವರು ತಿಳಿದು ಕೊಂಡಿದ್ದರು. (೪. ವ. ೨ ತಿಮೊ. ೩. ೧೨.)

2. ಅವರು ಕರ್ತನಲ್ಲಿ ನೆಲೆಯಾಗಿರುವದು ಪೌಲನಿಗೆ ಜೀವವಾಗಿತ್ತು. ಯಾಕೋಬನ ಪ್ರಾಣವು ಬೆನ್ಯಮೀನನ ಪ್ರಾಣದ ಸಂಗಡ ಕಟ್ಟಲ್ಪಟ್ಟದ್ದ ಪ್ರಕಾರ (ಉತ್ಪ. ೪೪. ೩೦.) ಪಾಲನ ಪ್ರಾಣವು ಥೆಸ್ಸಲೊನೀಕ್ಯ ಸಭೆಯವರ ಪ್ರಾಣದ ಸಂಗಡ ಕಟ್ಟಲ್ಪಟ್ಟಿತ್ತು. ಅವರು ಕರ್ತನ ವಿಶ್ವಾಸದಲ್ಲಿ ನೆಲೆಯಾಗಿದ್ದು, ದೇವರ ವಿಷಯವಾಗಿಯೂ ಮನುಷ್ಯರ ವಿಷಯವಾಗಿಯೂ ತೋರಿಸ ತಕ್ಕ ಪ್ರೀತಿಯಲ್ಲಿ ಹೆಚ್ಚಿ, ಬೋಧಕರ ವಿಷಯವಾದ ಸ್ನೇಹದಲ್ಲಿ ಅವರು ಹೆಚ್ಚೆಚ್ಚಾಗಿ ಬೆಳಿಯುವದನ್ನು ನೋಡುವದೇ ಪೌಲನಿಗೆ ಜೀವದ ಹಾಗಿತ್ತು.

3. ಪೌಲನು ಅವರನ್ನು ನೋಡ ಅಪೇಕ್ಷಿಸಿದ್ದು ತನ್ನ ಸ್ವಪ್ರಯೋಜನಕ್ಕಾಗಿ ಅಲ್ಲ, ಅವರ ಮೇಲನ್ನು ಹುಡುಕುವದಕ್ಕಾಗಿ ಹಾಗೆ ಮಾಡಿದನು. ಅವರು ಗುಣ ಪಟ್ಟ ಕೂಡಲೆ ಪೌಲನು ಅವರನ್ನು ಬಿಟ್ಟು ಹೊರಡುವ ಹಾಗೆ ಸಂಭವಿಸಿದ್ದರಿಂದ, (ಅಪೊ. ಕ್ರಿ. ೧೭. ೧೦.) ವಿಶ್ವಾಸ ಜ್ಞಾನ ವಿಷಯಗಳಲ್ಲಿ ಇನ್ನೂ ಬಹಳ ಕೊರತೆಯುಳ್ಳವರಾಗಿದ್ದರು. ದೇವರ ಚಿತ್ತವನ್ನು ಅವರಿಗೆ ಪೂರ್ಣವಾಗಿ ಕಲಿಸಿ, ಅವರ ಕೊರತೆಯನ್ನು ನಿವರ್ತಿಸುವದೇ ಪೌಲನ ಕೋರಿಕೆಯಾಗಿತ್ತು.

4. ದೇವರು ತನ್ನ ಯತ್ನದಿಂದ ನಮ್ಮನ್ನು ನಿಮ್ಮ ಬಳಿಗೆ ನಡಿಸಲಿ ಎಂಬುವದೇ ಇದರ ತಾತ್ಪರ್ಯವು. ಈ ವಚನದಲ್ಲಿಯೂ, ೨ಥೆಸ್ಸ. ೨. ೧೬, ೧೭. ವಚನಗಳಲ್ಲಿಯೂ ಇರುವ ಪ್ರಾರ್ಥನೆಯು, ತಂದೆಗೂ ಕುಮಾರನಿಗೂ ಏಕವಾಗಿ ಮಾಡುವ ಪ್ರಾರ್ಥನೆಯಾಗಿದೆ.

5. ಪರಿಶುದ್ಧರು ಎಂಬುವದು ದೇವದೂತರನ್ನೂ, ದೇವದಾಸರಾದ ಮನುಷ್ಯರನ್ನೂ ಕುರಿತದ್ದು. ೧೩ನೇ ವಚನದಲ್ಲಿ ಕರ್ತನೆಂದು ಹೇಳಿರುವದು ಒಂದು ವೇಳೆ ಪರಿಶುದ್ಧಾತ್ಮನನ್ನು ಕುರಿತದ್ದು. (೨ ಥೆಸ್ಸ. ೩. ೫.) ಕ್ರಿಸ್ತನು ಹೇಳಿದ ಪ್ರಕಾರ ಆತನು ತನ್ನ ಪರಿಶುದ್ಧರ ಸಂಗಡ ಪ್ರಸನ್ನನಾಗುವ ಕಾಲದಲ್ಲಿ ಥೆಸ್ಸಲೊನೀಕ್ಯ ಸಭೆಯವರು ನಿಷ್ಕಳಂಕರಾಗಿ ಮಹಿಮೆಯಲ್ಲಿ ಪ್ರವೇಶಿಸ ಬೇಕೆಂಬುವದೇ ಪೌಲನು ತ್ರಿಯೇಕ ದೇವರಿಗೆ ಮಾಡಿದ ಪ್ರಾರ್ಥನೆಯಾಗಿದೆ.

6. ಕಡೆಯಲ್ಲಿ ಎಂಬುವದು ಮೂಲ ಭಾಷೆಯ ತಾತ್ಪರ್ಯದ ಪ್ರಕಾರ, ಉಳಿದದ್ದು ಎಂಬ ಅರ್ಥವಾಗುತ್ತದೆ. ಈ ಸಂಧಿಯಲ್ಲಿ ಒಂದು ನೂತನ ಸಂಗತಿಯನ್ನು ಪ್ರಾರಂಭಿಸಿರುವದರಿಂದ ಹೀಗೆ ಹೇಳಿ ಇದೆ. ಥೆಸ್ಸಲೊನೀಕ್ಯ ಸಭೆಯವರು ಅಜ್ಞಾನರ ಕೆಟ್ಟ ಪದ್ಧತಿಗಳನ್ನು ಬಿಟ್ಟು ಪರಿಶುದ್ಧರಾಗಿ ನಡಿಯ ಬೇಕೆಂದೂ, ಕ್ರಮವೂ ಯೋಗ್ಯತೆಯೂ ಜಾಗ್ರತೆಯೂ ಉಳ್ಳವರಾಗಿ ನಡಿಯ ಬೇಕೆಂದೂ, (೪. ೧—೧೨.) ಸತ್ತು ಹೋದ ಸಹೋದರರು ಕರ್ತನ ಪ್ರಸನ್ನತೆಯಲ್ಲಿ ಬದುಕಿರುವ ಉತ್ತಮರ ಸಂಗಡ ಮಹಿಮೆಯಲ್ಲಿ



ಪ್ರಕಾರ, [1]ಇನ್ನೂ ಹೆಚ್ಚಿರೆಂದು ನಿಮ್ಮನ್ನು ಬೇಡಿ ಕೊಂಡು, ಕರ್ತನಾದ ಯೇಸುವಿನಲ್ಲಿ ಬುದ್ಧಿ ಹೇಳುತ್ತೇವೆ.
೨, ೩ ಯಾಕಂದರೆ ಕರ್ತನಾದ ಯೇಸುವಿನಿಂದ ನಿಮಗೆ ಯಾವ ಅಪ್ಪಣೆಗಳನ್ನು ಕೊಟ್ಟೆವೆಂದು ಬಲ್ಲಿರಿ. ಯಾ
ಕಂದರೆ ಇದೇ ದೇವರ ಚಿತ್ತವು, ನೀವು ಪರಿಶುದ್ಧರಾಗುವದೇ. ಹ್ಯಾಗಂದರೆ ಜಾರತ್ವಕ್ಕೆ ದೂರವಾಗಿರುವದು—
೪, ೫ ಒಬ್ಬೊಬ್ಬನು ದೇವರನ್ನರಿಯದ ಜನಾಂಗಗಳ ಪ್ರಕಾರ [2]ದುರಾಶೆ ಪಡದೆ, ಪರಿಶುದ್ಧತ್ವದಲ್ಲಿಯೂ
೬ [3]ಘನತೆಯಲ್ಲಿಯೂ ತನ್ನ ಘಟವನ್ನು ಕಾಪಾಡ ತಿಳಿದು ಕೊಳ್ಳುವದು— ತನ್ನ ಸಹೋದರನನ್ನು [4]ವ್ಯವಹಾ
ರದಲ್ಲಿ ಅತಿಕ್ರಮಿಸದೆ, ವಂಚಿಸದೆ, ಇರುವದು—ಯಾಕಂದರೆ, ನಾವು ನಿಮಗೆ ಮುಂಚೆ ಹೇಳಿ ಸಾಕ್ಷಿ ಕೊಟ್ಟ
೭ ಪ್ರಕಾರ, [5]ಇವೆಲ್ಲವುಗಳ ನಿಮಿತ್ತ ಕರ್ತನು ಮುಯ್ಯಿಗೆ ಮುಯ್ಯಿ ತೀರಿಸುವವನಾಗಿದ್ದಾನೆ. ಹ್ಯಾಗಂದರೆ
೮ ದೇವರು ನಮ್ಮನ್ನು ಅಶುದ್ಧತ್ವಕ್ಕೆ ಅಲ್ಲ, ಪರಿಶುದ್ಧತ್ವಕ್ಕೆ ಕರೆದಿದ್ದಾನೆ. ಹೀಗಿರುವದರಿಂದ, ಅಲಕ್ಷ್ಯ ಮಾಡು
ವವನು ಮನುಷ್ಯನನ್ನಲ್ಲ, ತನ್ನ ಪರಿಶುದ್ಧಾತ್ಮವನ್ನು ನಮಗೆ ಕೊಟ್ಟ ದೇವರನ್ನೇ ಅಲಕ್ಷ್ಯ ಮಾಡುತ್ತಾನೆ.
೯ ಆದರೆ ಸಹೋದರರ ಸ್ನೇಹದ ವಿಷಯವಾಗಿ ನಿಮಗೆ ಬರೆಯುವದು ಅವಶ್ಯವಿಲ್ಲ; ಯಾಕಂದರೆ ಒಬ್ಬರ
೧೦ ನ್ನೊಬ್ಬರು ಪ್ರೀತಿ ಮಾಡ ನೀವೇ [6]ದೈವಬೋಧನೆ ಹೊಂದಿದವರಾಗಿದ್ದೀರಿ. ಎಲ್ಲಾ ಮಕೆದೋನ್ಯದಲ್ಲಿರುವ
ಎಲ್ಲಾ ಸಹೋದರರಿಗೆ ಅದನ್ನು ಮಾಡುತ್ತೀರಲ್ಲ? ಆದಾಗ್ಯೂ, ಸಹೋದರರೇ, ಇನ್ನೂ ಹೆಚ್ಚ ಬೇಕೆಂದೂ,
೧೧ ನೀವು ಹೊರಗಿನವರ ವಿಷಯ [7]ಚನ್ನಾಗಿ ನಡೆದು ಕೊಳ್ಳುವ ಹಾಗೆಯೂ, ನಿಮಗೆ ಯಾವದರಲ್ಲಿಯೂ ಕೊರತೆ
೧೨ ಇಲ್ಲದ ಹಾಗೆಯೂ, ನಾವು ನಿಮಗೆ ಆಜ್ಞಾಪಿಸಿದ ಪ್ರಕಾರ ಶಾಂತವಾಗಿರ ಪ್ರಯಾಸ ಪಟ್ಟು, ಸ್ವಂತ
ಕೆಲಸಗಳನ್ನು ನೋಡಿ ಕೊಂಡು, ನಿಮ್ಮ ಸ್ವಂತ ಕೈಗಳಿಂದ ಕಷ್ಟ ಮಾಡ ಬೇಕೆಂದೂ, ನಿಮಗೆ ಬುದ್ಧಿ ಹೇ
ಳುತ್ತೇವೆ.

ಸತ್ತು ಹೋದ ಸಹೋದರರಿಗೆ ಇನ್ನು ಮೇಲೆ ಬರುವ ಮಹಿಮೆಯನ್ನು ನೆನಸಿ ಆದರಣೆ ಹೊಂದುವದು;
ಎಚ್ಚತ್ತಿರುವ ಹಾಗೆ ಆಜ್ಞಾಪಿಸಿದ್ದು.

೧೩ ಇದಲ್ಲದೆ, ಸಹೋದರರೇ, ನಿರೀಕ್ಷೆ ಇಲ್ಲದ [8]ಮಿಕ್ಕಾದವರ ಪ್ರಕಾರ ದುಃಖ ಪಡದ ಹಾಗೆ, ನಿದ್ದೆ ಹೋದ

ಕಾಣಿಸುವರು. ಆದದರಿಂದ ಅವರ ವಿಷಯ ಅಧಿಕ ದುಃಖ ಪಡ ಬಾರದೆಂದೂ, (೧೩—೧೮. ವ.) ಕರ್ತನು ಫಕ್ಕನೆ ಪ್ರಸನ್ನನಾಗುವಾಗ, ಉತ್ತಮ ಭಕ್ತರಿಗೆ ನಿತ್ಯ ಸಂತೋಷವಾಗುವದರಿಂದ ಆತನ ಪ್ರಸನ್ನತೆಯನ್ನು ಆಶೆಯಿಂದ ಎದುರು ನೋಡಿ ಕೊಂಡಿರ ಬೇಕೆಂದೂ, (೫. ೧—೧೧.) ಕ್ರಿಸ್ತಮಾರ್ಗದ ಸತ್ಯದ ಪ್ರಕಾರ ಸದ್ಗುಣವುಳ್ಳವರಾಗಿ ತೋರ ಬೇಕೆಂದೂ, (೧೨—೨೨. ವ.) ತೋರಿಸಿ, ಪ್ರಾರ್ಥನೆಯಿಂದಲೂ ಆಶೀರ್ವಾದದಿಂದಲೂ ಪತ್ರಿಕೆಯನ್ನು ಮುಗಿಸಿ ಇದೆ. (೨೩—೨೮. ವ.)

1. ದೇವರ ಹೆಸರಿನಿಂದ ಕೊಡಲ್ಪಟ್ಟ ಆಜ್ಞೆಗಳ ಪ್ರಕಾರ ನಡೆದು ಕೊಂಡರೆ, ಸಕಲ ಸದ್ಗುಣಗಳಲ್ಲಿಯೂ ಹೆಚ್ಚುವದಕ್ಕೆ ಆಗುತ್ತದೆ.

2. ಘಟವೆಂಬ ಶರೀರವನ್ನು ಪರಿಶುದ್ಧವಾಗಿ ಇಟ್ಟು ಕೊಳ್ಳ ಬೇಕಾದರೆ, ದೇವರನ್ನರಿಯದೆ ಆತನಿಗೆ ಭಯ ಪಡದೆ ಇರುವ ಅಜ್ಞಾನರಲ್ಲಿ ಸಾಧಾರಣವಾಗಿ ನಡಿಯುವ ಜಾರತ್ವಕ್ಕೂ ಮೋಹದಿಚ್ಛೆಗೂ ತೊಲಗಿ ಇರ ಬೇಕು.

3. ಅಶುದ್ಧ ನಡತೆಯುಳ್ಳವರು ದೇವರ ಚಿತ್ತಕ್ಕೆ ಅವಿಧೇಯರಾಗಿಯೂ, ವಿವಾಹಸ್ಥಿತಿಯನ್ನು ಅಲಕ್ಷ್ಯ ಮಾಡುವವರಾಗಿಯೂ ನೆರೆಯವರಿಗೆ ಅನ್ಯಾಯ ಮಾಡುವವರಾಗಿಯೂ ಇರುವರು. ಉತ್ತಮ ಭಕ್ತರು ದೇವರ ಚಿತ್ತಕ್ಕೆ ಸರಿಯಾಗಿ, ದೇವರು ತಮ್ಮಲ್ಲಿ ವಾಸ ಮಾಡ ತಕ್ಕ ಹಾಗೆ ತಮ್ಮ ಘಟವನ್ನು ಪರಿಶುದ್ಧವಾಗಿ ಕಾಪಾಡಿ ಕೊಳ್ಳುವರು. (೨ ತಿಮೊ. ೨. ೨೧.)

4. ಇದು ವಿವಾಹಸಮ್ಮಂಧದ ವಿಶೇಷವಾದ ವಿಷಯವನ್ನು ಸೂಚಿಸುತ್ತದೆ.

5. ಮನುಷ್ಯರು ಅಲ್ಪವಾಗಿ ಎಣಿಸುವ ಇಂಥಾ ವಿಷಯಗಳನ್ನು ದೇವರು ಮುಖ್ಯವೆಂದೆಣಿಸಿ ಅವುಗಳಿಗೆ ನೀತಿಯಾಗಿ ಪ್ರತಿಫಲ ಕೊಡುವನು. ಈ ಕಟ್ಟಳೆಗಳನ್ನು ಅಲಕ್ಷ್ಯ ಮಾಡುವವನು (೬, ೮. ವ.) ದೇವರನ್ನು ಅಲಕ್ಷ್ಯ ಮಾಡುತ್ತಾನೆ. ಆತನು ನಮ್ಮನ್ನು ಅಶುದ್ಧತ್ವಕ್ಕೆ ಅಲ್ಲ, ಪರಿಶುದ್ಧತ್ವಕ್ಕೆ ಕರೆದಿದ್ದಾನೆ; ಇದಕ್ಕಾಗಿ ತನ್ನ ಆತ್ಮನನ್ನು ಸಹ ಅನುಗ್ರಹಿಸಿದ್ದಾನೆ.

6. ದೈವಬೋಧನೆ ಹೊಂದಿದ್ದಕ್ಕೆ ಸಹೋದರಸ್ನೇಹವು ಸಾಕ್ಷಿಯಾಗಿದೆ. (೧ ಯೋಹಾ. ೩. ೧೦, ೧೮.) ಥೆಸ್ಸಲೊನೀಕ್ಯ ಸಭೆಯವರು ಸಹೋದರಸ್ನೇಹವುಳ್ಳವರೆಂದು ಮಕೆದೋನ್ಯ ದೇಶದಲ್ಲೆಲ್ಲಾ ಪ್ರಕಟವಾಗಿತ್ತು.

7. ಚನ್ನಾಗಿ ಜಾಗ್ರತೆಯಾಗಿ ನಡಿಯುವವರು ಮತ್ತೊಬ್ಬರಿಗೆ ಎದುರು ನೋಡದೆ ಸ್ವಾಧೀನರಾಗಿದ್ದು, ಮತ್ತೊಬ್ಬರಿಗೆ ಉಪಕಾರ ಮಾಡಿ, ಎಲ್ಲರಿಂದಲೂ ಘನ ಹೊಂದುವರು. ಕ್ರೈಸ್ತರೆಲ್ಲರೂ ಹೀಗೆ ನಡಿದರೆ, ಕ್ರಿಸ್ತನ ಮಾರ್ಗವು ಮಹಿಮೆ ಪಡುವದು.

8. ಮಿಕ್ಕಾದವರು ಅಂದರೆ ಅಜ್ಞಾನರೂ (ಎಫೆ. ೨. ೧೨.) ಸದ್ದುಕಾಯರೂ ಮುಂತಾದವರು. ಇವರು ಪುನರುತ್ಥಾನವೂ ಜೀವವೂ ಆಗಿರುವ ಯೇಸು ಕ್ರಿಸ್ತನ ವಿಶ್ವಾಸವಿಲ್ಲದವರಾಗಿರುವ ಕಾರಣ, ಸತ್ತವರು ಪುನರುತ್ಥಾನವಾಗುವರೆಂದು ನಂಬಲಿಲ್ಲ. ಆದರೆ ಸತ್ತವರ ನಿಮಿತ್ತ ದುಃಖ ಪಡುವದು ದೋಷವಲ್ಲ. ಯೇಸು ಸಹ ಲಾಜರನ ನಿಮಿತ್ತ ಕಣ್ಣೀರು ಬಿಟ್ಟನು. ಆದಾಗ್ಯೂ ನಂಬಿಕೆ ಇಲ್ಲದವರ ಪ್ರಕಾರ ದುಃಖ ಪಡ ಬಾರದೆಂಬುವದೇ ಈ ವಚನದ ತಾತ್ಪರ್ಯವು.

೨೩ ಇದಲ್ಲದೆ, ಸಮಾಧಾನದ ದೇವರು ತಾನೇ ನಿಮ್ಮನ್ನು ಸಂಪೂರ್ಣವಾಗಿ ಪರಿಶುದ್ಧ ಮಾಡಲಿ; ಮತ್ತು
ನಿಮ್ಮ [1]ಪೂರ್ಣ ಆತ್ಮ ಪ್ರಾಣ ಶರೀರಗಳು ನಮ್ಮ ಕರ್ತನಾದ ಯೇಸು ಕ್ರಿಸ್ತನ ಬರುವಿಕೆಯಲ್ಲಿ ತಪ್ಪಿಲ್ಲದ
೨೪ ಹಾಗೆ, ಕಾಪಾಡಲ್ಪಡಲಿ. ನಿಮ್ಮನ್ನು ಕರೆಯುವವನು ನಂಬಿಕೆಯುಳ್ಳವನು; ಅವನು [2]ಅದನ್ನು ಮಾಡುವನು.
೨೫ ಸಹೋದರರೇ, ನಮಗೋಸ್ಕರ ಪ್ರಾರ್ಥನೆ ಮಾಡಿರಿ.
೨೬ ಸಹೋದರರೆಲ್ಲರನ್ನು [3]ಪರಿಶುದ್ಧ ಮುದ್ದಿನಿಂದ ವಂದಿಸಿರಿ.
೨೭ ಈ ಪತ್ರಿಕೆಯು ಪರಿಶುದ್ಧ ಸಹೋದರರೆಲ್ಲರಿಗೆ ಓದಿ ಹೇಳಲ್ಪಡ ಬೇಕೆಂದು, ನಿಮಗೆ [4]ಕರ್ತನ ಮೇಲೆ ಆಣೆ
ಇಡುತ್ತೇನೆ.
೨೮ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮ ಸಂಗಡ ಇರಲಿ. ಆಮೆನ್.

---

ಬೇಕು ಎಂಬುವದು ಒಳ್ಳೇ ಅಭಿಪ್ರಾಯವಾಗಿದೆ. ಕ್ರೈಸ್ತರೆಲ್ಲರೂ ಹೀಗೆ ನಡೆದರೆ ಎಷ್ಟೋ ಮಹಿಮೆಯಾಗಿರುವದು.

1. ಮನುಷ್ಯನು ಶರೀರವೆಂಬ ಜಡ ವಸ್ತುವುಳ್ಳವನಾಗಿಯೂ, ಆತ್ಮವೆಂಬ ಸೂಕ್ಷ್ಮ ವಸ್ತುವುಳ್ಳವನಾಗಿಯೂ ಇದ್ದಾನೆ. (೧ ಕೊರಿ. ೫. ೩.) ಆತ್ಮವು ಎರಡು ಭಾಗವೆಂದು ಹೇಳ ಬಹುದು. ಹೆಚ್ಚಿನ ಶಕ್ತಿಯುಳ್ಳದ್ದು ಆತ್ಮವೆಂದೂ, ತಗ್ಗಾದ ಶಕ್ತಿಯುಳ್ಳದ್ದು ಪ್ರಾಣವೆಂದೂ ಹೇಳ ಬಹುದು. (೧ ಕೊರಿ. ೧೫. ೪೪. ವಚನದ ವ್ಯಾಖ್ಯಾನ ನೋಡ ಬೇಕು.) ಕರ್ತನು ಪ್ರಸನ್ನನಾಗುವಾಗ ಈ ತ್ರಿಕರಣಶುದ್ಧಿಯುಳ್ಳವರಾಗಿ ತೋರುವವರೇ ಪರಮ ಪದವಿಯನ್ನು ಹೊಂದುವರು.

2. ಈ ತ್ರಿಕರಣಶುದ್ಧಿಯುಳ್ಳವರಾಗಿ ನಡಿಯುವದು ಅಸಾಧ್ಯವಾದಾಗ್ಯೂ, ಸತ್ಯಪರನಾದ ದೇವರು ಅದನ್ನು ಸಂಪೂರ್ಣ ಮಾಡುವನು. ನಮ್ಮನ್ನು ಪರಿಶುದ್ಧತ್ವಕ್ಕಾಗಿ ಕರೆದವನು ನಂಬಿಕೆಯುಳ್ಳವನಾಗಿರುವದರಿಂದ, ನಮ್ಮನ್ನು ಪೂರ್ಣ ಪರಿಶುದ್ಧರಾಗ ಮಾಡುವನು.

3. ರೋಮಾ. ೧೬. ೧೬. ವಚನದ ವ್ಯಾಖ್ಯಾನ ನೋಡ ಬೇಕು.

4. ಪೌಲನು ಈ ಪತ್ರಿಕೆ ಎಲ್ಲರಿಗೂ ಓದಿ ಹೇಳಲ್ಪಡ ಬೇಕೆಂದು ಆಣೆ ಇಟ್ಟು ಆಜ್ಞಾಪಿಸುತ್ತಾನೆ. ರೋಮನ್ ಸಭೆ ವೇದವನ್ನು ಓದ ಕೂಡದೆಂದು ಶಾಪವಿಟ್ಟು ಆಜ್ಞಾಪಿಸುವದು ಎಷ್ಟೋ ವಿರೋಧವಾದದ್ದು.

# THE SECOND EPISTLE OF PAUL THE APOSTLE TO THE THESSALONIANS.

## ಅಪೊಸ್ತಲನಾದ ಪೌಲನು ಥೆಸ್ಸಲೊನೀಕ್ಯರಿಗೆ ಬರೆದ ಎರಡನೇ ಪತ್ರಿಕೆಯ ಪೀಠಿಕೆ.

ಥೆಸ್ಸಲೊನೀಕ್ಯರ ಮೊದಲನೇ ಪತ್ರಿಕೆಯು ಬರೆಯಲ್ಪಟ್ಟ ಕೆಲವು ತಿಂಗಳುಗಳ ತರುವಾಯ ಈ ಎರಡನೇ ಪತ್ರಿಕೆಯು ಬರಿಯಲ್ಪಟ್ಟಿತೆಂದು ತೋರುತ್ತದೆ. ಇದು ಸಹ ಕೊರಿಂಥ ಪಟ್ಟದಲ್ಲಿ ೫೩ನೇ ವರುಷ ಬರಿಯಲ್ಪಟ್ಟಿತು. ಮೊದಲನೇ ಪತ್ರಿಕೆಯು ಬರೆಯಲ್ಪಟ್ಟಾಗ ಪೌಲನ ಸಂಗಡ ಇದ್ದ ಸೀಲನೂ ತಿಮೊಥೆಯನೂ ಇನ್ನೂ ಅವನ ಸಂಗಡಲೇ ಇದ್ದರು. (೧. ೧.) ಆದಾಗ್ಯೂ ಅವನು ಆಸ್ಯಕ್ಕೆ ಹೋದಾಗ, ಅವರು ಅವನ ಸಂಗಡ ಹೋದ ಹಾಗೆ ತೋರಲಿಲ್ಲ. (ಅಪೊ. ಕ್ರಿ. ೧೭. ೫, ೧೮.)

ಕೆಲವು ಕಳ್ಳಬೋಧಕರು ಪೌಲನ ಹೆಸರಿನಿಂದ, ಕರ್ತನು ಶೀಘ್ರವಾಗಿ ಪ್ರಸನ್ನನಾಗುವನೆಂದು ಪ್ರಸಂಗಿಸಿದ ಹಾಗೆ ತೋರುತ್ತದೆ. (೨. ೨.) ಅದರಿಂದ ಸಭೆಯವರಲ್ಲಿ ಅನೇಕರು ತಮ್ಮ ಕೆಲಸಗಳನ್ನು ಬಿಟ್ಟು ಬಿಟ್ಟು, ಸೋಮಾರಿತನದಿಂದ ಕಾಲವನ್ನು ವ್ಯರ್ಥವಾಗಿ ಕಳಿಯುತ್ತಾ ಇದ್ದರೆಂದು ಕಾಣುತ್ತದೆ.

ಅವರಲ್ಲಿದ್ದ ಇಂಥಾ ತಪ್ಪಾಲೋಚನೆಯನ್ನು ನಿವರ್ತಿಸಲೂ ಕರ್ತನು ಪ್ರಸನ್ನನಾಗುವದಕ್ಕಿಂತ ಮುಂಚೆ ಲೋಕದಲ್ಲಿ ಅನೇಕ ಸಂಗತಿಗಳು ಸಂಭವಿಸ ಬೇಕೆಂದು ತೋರಿಸಲೂ, ಪೌಲನು ಈ ಪತ್ರಿಕೆಯನ್ನು ಬರೆದನೆಂದು ತೋರುತ್ತದೆ. (೨. ೧—೧೨.) ಅವರ ವಿಶ್ವಾಸ, ಪ್ರೀತಿ, ಸಾಧನೆ ಮುಂತಾದ ಸುಗುಣಗಳಿಗೋಸ್ಕರ ಪೌಲನು ಅವರನ್ನು ಹೊಗಳಿ, ಪರಿಶುದ್ಧವಾಗಿ ನಡಿಯಲೂ, ಕ್ರಮಹೀನತ್ವವೂ ಸೋಮಾರಿತನವೂ ಉಳ್ಳವರಿಗೆ ಖಂಡಿತವಾಗಿ ಬುದ್ಧಿ ಹೇಳಲೂ, ಅವರಿಗೆ ಆಜ್ಞಾಪಿಸಿ ಪತ್ರಿಕೆಯನ್ನು ಮುಗಿಸುತ್ತಾನೆ. (೧. ಸಂಧಿ; ೨. ೧೨—೧೭; ೩. ಸಂಧಿ.)